# ಜಗದ್ಗುರು ಶ್ರೀರಾಮಕೃಷ್ಣಸ್ತೋತ್ರ – ೨

**ಸತ್ಯಬೋಧತಯಾ ಸಾಂಗಾನ್ ಸರ್ವಧರ್ಮಾನ್ ಸಮಾಚರನ್।**
**ಧರ್ಮಮಾತ್ರಂತು ಸತ್ಯಂ ವೈ ಯೇನ ಸಮ್ಯಕ್ ಸುನಿಶ್ಚಿತಮ್ ॥**
**ನಮೋಽಸ್ತು ರಾಮಕೃಷ್ಣಾಯ ತಸ್ಮೈ ಶ್ರೀಗುರವೇ ನಮಃ ॥ ೪ ॥**



ಎಲ್ಲ ಧರ್ಮಗಳನ್ನೂ ಸತ್ಯದ ಅರಿವಿನೊಂದಿಗೆ ಸಾಂಗವಾಗಿ ಆಚರಿಸುತ್ತಾ, ಧರ್ಮವೊಂದೇ ಸತ್ಯವೆಂದು ಚೆನ್ನಾಗಿ ದೃಢಪಡಿಸಿದ ಗುರು ಶ್ರೀರಾಮಕೃಷ್ಣರಿಗೆ ನಮಸ್ಕಾರ.

**ಯೋ ಭಕ್ತಾನ್ ಭಕ್ತಿಮಾರ್ಗೇ ತು ನಿನಾಯ ಲೋಕನಾಯಕಃ।**
**ಆಕೃಷ್ಯ ಮಾನಸಂ ತೇಷಾಂ ಭಕ್ತಿಸಂಚಿತಯಾ ಗಿರಾ ॥**
**ದರ್ಶಯಿತ್ವಾ ಮಹಾಭಾವಂ ಪರಮಾನಂದದಾಯಕಮ್ ।**
**ನಮೋಽಸ್ತು ರಾಮಕೃಷ್ಣಾಯ ತಸ್ಮೈ ಶ್ರೀಗುರವೇ ನಮಃ ॥ ೫ ॥**

ಲೋಕನಾಯಕರಾದ ಅವರು ತಮ್ಮ ಭಕ್ತಿಪೂರಿತವಾದ ಮಾತಿನಿಂದ ಭಕ್ತರ ಮನಸ್ಸನ್ನು ಸೆಳೆದು, ಪರಮಾನಂದವನ್ನು ಉಂಟುಮಾಡುವ ಮಹಾಭಾವವನ್ನು ತೋರಿಸಿ, ಅವರನ್ನು ಭಕ್ತಿಮಾರ್ಗದಲ್ಲಿ ಮುನ್ನಡೆಸಿದರು. ಅಂತಹ ಗುರು ಶ್ರೀರಾಮಕೃಷ್ಣರಿಗೆ ನಮಸ್ಕಾರ.

**ಜ್ಞಾನಿನೋ ಜ್ಞಾನಮಾರ್ಗೇ ಚ ಯೇನ ಸಮ್ಯಕ್ ಪ್ರವರ್ತಿತಾಃ।**
**ನಮೋಽಸ್ತು ರಾಮಕೃಷ್ಣಾಯ ತಸ್ಮೈ ಶ್ರೀಗುರವೇ ನಮಃ ॥ ೬ ॥**

ಜ್ಞಾನಮಾರ್ಗವನ್ನು ಆಶ್ರಯಿಸಿದವರನ್ನು ಆ ಮಾರ್ಗದಲ್ಲಿ ಚೆನ್ನಾಗಿ ಮುನ್ನಡೆಸಿದ ಗುರು ಶ್ರೀರಾಮಕೃಷ್ಣ ರಿಗೆ ನಮಸ್ಕಾರ.

**ಯೈರ್ಮರ್ತ್ಯೈರ್ಧಾರ್ಮಿಕಾ ಯಸ್ಮಿನ್ ಧರ್ಮಮಾರ್ಗೇ ವ್ಯವಸ್ಥಿತಾಃ।**
**ತೇಷಾಂ ತನ್ಮತಮಾದೃತ್ಯ ಭಕ್ತಿಸ್ತತ್ರ ದೃಢೀಕೃತಾ ॥**
**ಪ್ರೋತ್ಸಾಹಿತಾ ಯಥಾನ್ಯಾಯಂ ಯೇನ ತತ್ಸಾಧನೇಷ್ವಪಿ।**
**ನಮೋಽಸ್ತು ರಾಮಕೃಷ್ಣಾಯ ತಸ್ಮೈ ಶ್ರೀಗುರವೇ ನಮಃ ॥ ೭ ॥**

ಅವರವರ ಮತವನ್ನು ಅವಲಂಬಿಸಿ ಧಾರ್ಮಿಕರಾಗಿದ್ದವರಿಗೆ ಧರ್ಮದ ಸರಿಯಾದ ಮಾರ್ಗವನ್ನು ತಿಳಿಸಿ, ಅವರನ್ನು ಆ ಮಾರ್ಗದಲ್ಲಿ ಸುವ್ಯವಸ್ಥೆಗೊಳಿಸಿದರು; ಅದನ್ನು ಸಾಧನೆ ಮಾಡುವಲ್ಲಿ ನ್ಯಾಯಸಮ್ಮತವಾದ ರೀತಿಯಲ್ಲಿ ಪ್ರೋತ್ಸಾಹಿಸಿ, ತಮ್ಮ ಮತದಲ್ಲಿ ಭಕ್ತಿ ದೃಢವಾಗುವಂತೆ ಮಾಡಿದಂತಹ ಗುರು ಶ್ರೀರಾಮಕೃಷ್ಣರಿಗೆ ನಮಸ್ಕಾರ.

**ಪೂಜಿತಾ ಯೇನ ವೈ ಶಶ್ವತ್ ಸರ್ವೇಽಪಿ ಸಾಂಪ್ರದಾಯಿಕಾಃ।**
**ಸಂಪ್ರದಾಯವಿಹೀನೋ ಯಃ ಸಂಪ್ರದಾಯಂ ನ ನಿಂದತಿ।**
**ನಮೋಽಸ್ತು ರಾಮಕೃಷ್ಣಾಯ ತಸ್ಮೈ ಶ್ರೀಗುರವೇ ನಮಃ ॥ ೮ ॥**

ಸ್ವತಃ ಒಂದು ನಿರ್ದಿಷ್ಟ ರೀತಿಯ ಸಂಪ್ರದಾಯವನ್ನು ಅನುಸರಿಸದೆ ಇದ್ದರೂ, ಯಾವ ಸಂಪ್ರದಾಯವನ್ನೂ ನಿಂದಿಸದೆ, ಎಲ್ಲ ಸಂಪ್ರದಾಯದವರನ್ನೂ ಅವರು ಗೌರವಿಸಿದರು. ಅಂತಹ ಗುರು ಶ್ರೀರಾಮಕೃಷ್ಣ ರಿಗೆ ನಮಸ್ಕಾರ.

— ಸ್ವಾಮಿ ಅಭೇದಾನಂದ

**ಸೂಕ್ತಿಪ್ರಭ**

## ಗುರು ಸೂಕ್ತಿಗಳು

**ಪಾ**ರಮಾರ್ಥಿಕ ಜ್ಞಾನವನ್ನು ದೀರ್ಘನಮಸ್ಕಾರದಿಂದಲೂ, ಪರಿಪ್ರಶ್ನೆಯಿಂದಲೂ, ಗುರುವಿನ ಶುಶ್ರೂಷೆಯಿಂದಲೂ ತಿಳಿದುಕೊಳ್ಳಬೇಕು. ತತ್ತ್ವವನ್ನರಿತ ಗುರು ಆಗ ನಿನಗೆ ಆ ಜ್ಞಾನವನ್ನು ನೀಡುವನು.

— ಶ್ರೀಕೃಷ್ಣ

**ಮ**ನುಷ್ಯದೇಹವನ್ನು ಹೊಂದುವುದು ಬಲುಕಷ್ಟ. ಅದಕ್ಕೆ ಗುರುವೇ ಅಂಬಿಗ. (ದೇವರೆಂಬ) ಅನುಕೂಲವಾದ ಗಾಳಿಯಿದ್ದಾಗ ಸಂಸಾರಸಾಗರವನ್ನು ದಾಟಬೇಕು; ಇಲ್ಲದಿದ್ದರೆ ಅದು ಆತ್ಮಹತ್ಯೆಗೆ ಸಮಾನ.

— ಶ್ರೀಮದ್ಭಾಗವತ

**ಗು**ರು ಶಾಶ್ವತವಾದುದರ ಸ್ಪರ್ಶ ಮಾಡಿಸುತ್ತಾನೆ; ತನ್ನ ಪ್ರಭಾವ ಎಲ್ಲಿಯತನಕ ಎಂಬುದನ್ನು ಎಂದಿಗೂ ಹೇಳುವುದಿಲ್ಲ.

— ಹೆನ್ರಿ ಆಡಮ್ಸ್

**ಆ**ಡದೆ ಮಾಡುವವ ರೂಢಿಯೊಳಗುತ್ತಮನು ।
ಆಡಿ ಮಾಡುವನು ಮಧ್ಯಮನು । ಅಧಮ ತಾ ।
ನಾಡಿಯೂ ಮಾಡ ಸರ್ವಜ್ಞ ॥

— ಸರ್ವಜ್ಞ

**ಶಿ**ಷ್ಯನ ಮಟ್ಟಕ್ಕೆ ಇಳಿದು ಬಂದು, ತನ್ನ ಆತ್ಮಶಕ್ತಿಯನ್ನು ಅವನಿಗೆ ದಾನ ಮಾಡಿ, ಶಿಷ್ಯನ ಮನಸ್ಸಿನ ಮೂಲಕ ನೋಡಿ ತಿಳಿದುಕೊಳ್ಳುವಂತಹವನೇ ನಿಜವಾದ ಗುರು. ಅಂತಹ ಗುರುವೇ ನಿಜವಾಗಿ ಬೋಧಿಸಬಲ್ಲ, ಉಳಿದವರಲ್ಲ.

— ಸ್ವಾಮಿ ವಿವೇಕಾನಂದ

**ಗು**ರುವಿನ ಕೃಪೆ ದೊರೆತುದೇ ಆದರೆ, ಇನ್ನು ಹೆದರಬೇಕಾಗಿಲ್ಲ. ಆತ ನೀನು ಯಾರು, ನಿನ್ನ ಸ್ವರೂಪ ಏನು ಎಂಬುದನ್ನು ತಿಳಿಸಿಕೊಡುತ್ತಾನೆ.

— ಶ್ರೀರಾಮಕೃಷ್ಣ ಪರಮಹಂಸರು

# ರಾಮಕೃಷ್ಣ ಮಠ, ರಾಮನಾಥಪುರಂ

No. 1, Raja Aranmanai Mele Street, Ramanathapuram (Ramnad),
Tamil Nadu 623 501 Ph : 98849 88178 Email : ramanathapuram@rkmm.org



## ಬಡಜನತೆ ಹಾಗೂ ಸಂತ್ರಸ್ತರಿಗಾಗಿ ಶೈಕ್ಷಣಿಕ, ವೈದ್ಯಕೀಯ ಸೇವೆ

**ಪಾ**ಶ್ಚಾತ್ಯ ದೇಶಗಳಲ್ಲಿ ನಮ್ಮ ಸನಾತನ ಧರ್ಮದ ಸಂದೇಶವನ್ನು ಪ್ರಚಾರ ಮಾಡುವುದಕ್ಕಾಗಿ ತೆರಳಿದ್ದ ಸ್ವಾಮಿ ವಿವೇಕಾನಂದರು ೧೮೯೭ರಲ್ಲಿ ಭಾರತಕ್ಕೆ ಮರಳಿದಾಗ ರಾಮನಾಥಪುರದ ಮಹಾರಾಜರಾದ ಶ್ರೀ ಭಾಸ್ಕರ ಸೇತುಪತಿಯವರು ಅವರಿಗೆ ಸಂಭ್ರಮದ ಸ್ವಾಗತವನ್ನು ಮಾಡಿದರು. ಸ್ವಾಮೀಜಿಯವರು ಮಹಾರಾಜ ಭಾಸ್ಕರ ಸೇತುಪತಿಯ ಅರಮನೆಯ ಅತಿಥಿ ಗೃಹದಲ್ಲಿ ೧೮೯೭ ರ ಜನವರಿ ೨೯ರಿಂದ ೩೧ರ ವರೆಗೆ, ಮೂರು ದಿನ ತಂಗಿದ್ದರು. ಅಲ್ಲಿ ಅವರು ಮಾಡಿದ ಭಾಷಣಗಳು ಭಾರತದ ಉದ್ದಗಲಕ್ಕೂ ಪ್ರಚಾರವಾಗಿ, ರಾಷ್ಟ್ರಜಾಗೃತಿಗೆ ನೆರವಾಯಿತು.

ಆ ಪ್ರದೇಶದಲ್ಲಿ ಇದೀಗ ರಾಮಕೃಷ್ಣ ಮಠದ ಹೊಸ ಶಾಖೆ ಆರಂಭಗೊಂಡಿದೆ. ೨೦೧೬ರ ಜೂನ್ ೨೬ರಂದು ಇದು ಬೇಲೂರು ಮಠದಲ್ಲಿರುವ ರಾಮಕೃಷ್ಣ ಮಠ ಹಾಗೂ ಮಿಷನ್ನಿಗೆ ಅಧಿಕೃತವಾಗಿ ಸೇರ್ಪಡೆಗೊಂಡಿತು. ನಗಚಿ, ಮಂಡಪಂ, ಪಾಂಬನ್ ಹಾಗೂ ರಾಮೇಶ್ವರಂ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರಲ್ಲಿ ಬಹುಪಾಲು ಮೀನುಗಾರರಾಗಿದ್ದು , ಬಡತನದ ಕಾರಣದಿಂದ ಅವರ ಮಕ್ಕಳು ಕೂಡ ಮೀನು ಹಿಡಿಯುವ ಕೆಲಸ ಮಾಡಬೇಕಾಗಿದೆ; ಅವರು ವಿದ್ಯಾಭ್ಯಾಸ ಹಾಗೂ ಉನ್ನತ ಶಿಕ್ಷಣ ನಡೆಸಲಾಗದ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಹೊಸದಾಗಿ ಆರಂಭವಾಗಿರುವ ರಾಮಕೃಷ್ಣ ಮಠವು ಈ ದಿಕ್ಕಿನಲ್ಲಿ ಈ ಕೆಳಗಿನ ಸೇವಾ ಕಾರ್ಯಗಳನ್ನು ನಡೆಸಲು ಉದ್ದೇಶಿಸಿದ್ದು, ಈ ಕಾರ್ಯವು ಸಫಲವಾಗಲು ತಮ್ಮಿಂದ ಉದಾರ ಆರ್ಥಿಕ ನೆರವನ್ನು ಕೋರುತ್ತಿದೆ:

| | |
|---|---|
| 1. | **ಶೈಕ್ಷಣಿಕ ಸೇವೆ:** 80 ಮಂದಿ ವಿದ್ಯಾರ್ಥಿಗಳಿಗೆ ನರ್ಸಿಂಗ್, ಪಾಲಿಟೆಕ್ನಿಕ್ ಹಾಗೂ ಕಲಾ-ವಿಜ್ಞಾನ ವಿಭಾಗಗಳಲ್ಲಿ ಉನ್ನತ ಶಿಕ್ಷಣಕ್ಕಾಗಿ ಪ್ರತಿ ವಿದ್ಯಾರ್ಥಿಗೆ ಒಂದು ವರ್ಷಕ್ಕೆ 30,000; ಒಟ್ಟು ಮೊತ್ತ 24 ಲಕ್ಷ |
| 2. | **ಸಂಚಾರಿ ವೈದ್ಯಕೀಯ ಸೇವೆ:** ಇದರಿಂದ ಕೀಲನಗಾಚಿ ಹಾಗೂ ಇತರ ಸಮೀಪದ ಹಳ್ಳಿಗಳಲ್ಲಿ ಮೊಬೈಲ್ ವೈದ್ಯಕೀಯ ಸೇವೆಗೆ ವರ್ಷಕ್ಕೆ 6 ಲಕ್ಷ ರೂ. |
| 3. | **ಕೋಚಿಂಗ್ ಕ್ಲಾಸ್:** 75 ಮಂದಿ ಬಡ ವಿದ್ಯಾರ್ಥಿಗಳಿಗೆ ಉಚಿತ ಶೈಕ್ಷಣಿಕ ತರಬೇತಿಯೊಂದಿಗೆ ಆಹಾರ, ಸಮವಸ್ತ್ರ, ನೋಟ್ ಪುಸ್ತಕ, ಟೂತ್‌ಪೇಸ್ಟ್ ಹಾಗೂ ಇತರ ಶೌಚಾಲಯ ಸಾಮಗ್ರಿಗಳಿಗೆ ವರ್ಷಕ್ಕೆ 4 ಲಕ್ಷ ರೂ. |
| 4. | **ಹೊಲಿಗೆ ತರಬೇತಿ:** ಬಡ ಹೆಣ್ಣುಮಕ್ಕಳಿಗೆ 3 ತಿಂಗಳ ಹೊಲಿಗೆ ತರಬೇತಿಗಾಗಿ ಹಾಗೂ ಅವರ ಜೀವನೋಪಾಯಕ್ಕೆ ಹೊಲಿಗೆ ಯಂತ್ರ ಒದಗಿಸಿ ಕೊಡಲು ವರ್ಷಕ್ಕೆ 6 ಲಕ್ಷ ರೂ. |
| 5. | **500 ಮಂದಿ ಬಡ ವಿದ್ಯಾರ್ಥಿಗಳಿಗೆ ಶಾಲಾ ಸಮವಸ್ತ್ರ :** ವರ್ಷಕ್ಕೆ 3 ಲಕ್ಷ ರೂ. |
| 6. | **10 ಮಂದಿ ಬಡ ವಿದ್ಯಾರ್ಥಿಗಳಿಗೆ ಶಾಲಾ ಸಮವಸ್ತ್ರ :** ವರ್ಷಕ್ಕೆ 6000 ರೂ. |
| 7. | **ಸಾಧು ನಿವಾಸ ಹಾಗೂ ಸಭಾಂಗಣದ ನಿರ್ಮಾಣಕ್ಕೆ :** 2.15 ಕೋಟಿ ರೂ. |

**ಈ ಮೇಲಿನ ಚಟುವಟಿಕೆಗಳಿಗಾಗಿ ನೀವು 10,000/- ಹಾಗೂ ಹೆಚ್ಚಿನ ಮೊತ್ತದ 'ಶಾಶ್ವತ ನಿಧಿ'ಯನ್ನು ಮಾಡಬಹುದಾಗಿದೆ.**

ಈ ಸೇವಕಾರ್ಯದಲ್ಲಿ ಆರ್ಥಿಕ ನೆರವು ನೀಡುವ ಮೂಲಕ ಭಗವಂತನ ಮಕ್ಕಳ ಬೆಳವಣಿಗೆಗೆ ನೆರವಾಗಲು ಹಾಗೂ ಅದರಿಂದ ದೇವರ ಅನುಗ್ರಹಕ್ಕೆ ಪಾತ್ರರಾಗಲು ತಮ್ಮಲ್ಲಿ ನಾವು ಪ್ರಾರ್ಥಿಸಿಕೊಳ್ಳುತ್ತಿದ್ದೇವೆ.

ಎಲ್ಲ ದೇಣಿಗೆಗಳಿಗೂ 1961ರ 80G ಆದಾಯ ತೆರಿಗೆ ಕಾಯಿದೆಯನ್ವಯ ವಿನಾಯಿತಿ ಇರುತ್ತದೆ. ಚೆಕ್, ಡ್ರಾಫ್ಟ್, ಮನಿಆರ್ಡರ್‌ಗಳನ್ನು ''Ramakrishna Math, Ramanathapuram'' ಎಂಬ ಹೆಸರಿನಲ್ಲಿ ತೆಗೆದು ನಮಗೆ ಕಳುಹಿಸಿಕೊಡಬಹುದಾಗಿದೆ. ಇದೇ ರೀತಿ, RTGS ಮೂಲಕ ಕೆಳಗೆ ನೀಡಿರುವ ಖಾತೆಗೆ ಹಣವನ್ನು ವರ್ಗಾಯಿಸಬಹುದು. **ಹಣವನ್ನು ವರ್ಗಾಯಿಸಿದ ಬಳಿಕ ತಮ್ಮ ಹೆಸರು, ವಿಳಾಸ ಹಾಗೂ PAN ನಂಬರ್ ಇವನ್ನು ನಮಗೆ ತಿಳಿಸಿಕೊಡಬಾಕಾಗಿ ವಿನಂತಿ.**

| | | |
|---|---|---|
| Account name | : | Ramakrishna Math |
| Account Number | : | 6426034057 |
| Bank | : | Indian Bank |
| IFS Code | : | IDIB000R051 |
| Branch | : | Ramanathapuram |

ಇತಿ ಭಗವತ್ಸೇವೆಯಲ್ಲಿ ತಮ್ಮ,
**ಸ್ವಾಮಿ ಸುತಪಾನಂದ**
ಅಧ್ಯಕ್ಷರು



ಸಂಚಾರಿ ವೈದ್ಯಕೀಯ ವಾಹನ


ಹೊಲಿಗೆ ತರಬೇತಿ


ವೈದ್ಯಕೀಯ ಶಿಬಿರ


ಸ್ಕಾಲರ್‌ಶಿಪ್


ಕೋಚಿಂಗ್ ಕ್ಲಾಸ್


Dream,
Explore.
Discover,
Land of God
Land of Heritage
Land of Beautiful
Nature, Mountains
Beaches and Forests
Visit Bali
Indonesia
On this Dasara
Deepavali Holidays
For Booking Contact
Orchid
Travel & Tours
#98, 1st Floor, DVG Road,
Basavanagudi, Bangalore - 04
Office 080-26621983, 26617178
Mobile +91 9880079588 / 9900080793
www.orchidtours.net




# ಶಾಸ್ತ್ರ ಹಾಗೂ ಇತರ ಗ್ರಂಥಗಳು

**‘ಓದಿ ಓದಿ ಮರುಳಾದ ಕೂಚುಭಟ್ಟ, ಓದಲಿಲ್ಲ ನಮ್ಮ ರೈತ ಅನ್ನಕೊಟ್ಟ’** — ಎಂಬ ಗಾದೆಯನ್ನು ನಾವೆಲ್ಲ ಕೇಳಿದ್ದೇವೆ. ದಿನ ವಿಡೀ ಕುಳಿತು ಓದುವವರನ್ನು ‘ಪುಸ್ತಕದ ಹುಳು’ ಎಂದೂ ಕರೆಯುವುದುಂಟು. ಹೆಚ್ಚು ಓದಿದರೆ ಅದೊಂದು ಗೀಳಾಗಿ ಬಿಡುತ್ತದೆ, ನಿಜಜೀವನದಲ್ಲಿ ಅವನು ನಿರುಪಯೋಗಿ ಎನಿಸಿ ಕೊಳ್ಳುತ್ತಾನೆ — ಈ ಹಿನ್ನೆಲೆಯಲ್ಲಿ ಹುಟ್ಟಿದ ಮಾತುಗಳಿವು. ನಿಜ ಜೀವನ ಬೇರೆ, ಪುಸ್ತಕ ಜ್ಞಾನ ಬೇರೆ ಎಂದು ಹೇಳುತ್ತ, ಪುಸ್ತಕದಿಂದ ಕಲಿತ ವಿದ್ಯೆಯನ್ನು ‘ಪುಸ್ತಕದ ಬದನೆಕಾಯಿ’ ಎಂದು ಲೇವಡಿ ಮಾಡುವುದೂ ಸರ್ವೇಸಾಮಾನ್ಯ. ಪುಸ್ತಕದಲ್ಲಿ ಬದನೆಕಾಯಿ ಚಿತ್ರವಿದ್ದರೆ, ಅದನ್ನು ತಿನ್ನಲು ಬರುವುದೆ? ಅದೇ ರೀತಿ ಓದಿ ತಿಳಿದುಕೊಂಡ ಜ್ಞಾನ ಬೇರೆ, ಅನುಭವದಿಂದ ಕಲಿತ ಜ್ಞಾನ ಬೇರೆ. ಅನುಭವವಿಲ್ಲದೆ ಬರೀ ಓದಿನಿಂದ ಕಲಿತದ್ದು ಕೆಲಸಕ್ಕೆ ಬಾರದ್ದು ಎಂದು ಅನೇಕ ಕಡೆ ಕೇಳುತ್ತೇವೆ. ಶ್ರೀರಾಮಕೃಷ್ಣರು ಕೂಡ ‘ಪಂಚಾಂಗದಲ್ಲಿ ಚೆನ್ನಾಗಿ ಮಳೆ ಬರುತ್ತದೆ ಎಂದು ಬರೆದಿದೆ. ಆದರೆ ಆ ಪುಸ್ತಕವನ್ನು ಹಿಂಡಿದರೆ ಒಂದು ಬಿಂದು ನೀರೂ ಸುರಿ ಯದು’ ಎನ್ನುತ್ತಾರೆ.

ಪ್ರಾಯೋಗಿಕ ಅರ್ಥದಲ್ಲಿ ಈ ಮಾತುಗಳೆಲ್ಲ ನಿಜವೆ. ಆಯಾ ಸಂದರ್ಭಕ್ಕನುಗುಣವಾಗಿ ಹಾಗೆ ಹೇಳುವುದು ಸರಿ. ಆದರೆ ಈ ಕಾರಣದಿಂದ ಗ್ರಂಥಗಳ ಮಹತ್ವವನ್ನು ಅಲ್ಲಗಳೆಯಲಾಗದು. ಪುಸ್ತಕದ ಓದು, ಅಧ್ಯಯನ, ಗ್ರಂಥರಚನೆ, ವಿದ್ಯಾಭ್ಯಾಸ — ಇವೆಲ್ಲ ಪ್ರತಿಯೊಬ್ಬನ ಜೀವನದಲ್ಲಿ ಇಂದು ಅಗತ್ಯವಾದ ಸಂಗತಿ ಯಾಗಿವೆ. ಬೌದ್ಧಿಕ ವಿಕಾಸ, ಚಿಂತನೆ, ಹೊಸ ಹೊಸ ತಿಳಿವಳಿಕೆ, ಮಾಹಿತಿ ವಿನಿಮಯ, ನಿಖರ ಜ್ಞಾನದ ದೃಢೀಕರಣ, ವಿಸ್ತಾರವಾದ ಜ್ಞಾನಶಾಖೆಗಳ ದಾಖಲಾತಿ — ಇವೆಲ್ಲ ಸಾಧ್ಯವಾಗುವುದು ಪುಸ್ತಕಗಳಿಂದ. ಮಾನವನ ಜ್ಞಾನದ ಅಭಿವೃದ್ಧಿಗೆ ಗ್ರಂಥಗಳ ಕೊಡುಗೆ ಅಪಾರವಾದದ್ದು. ಆದರೆ, ಆಧ್ಯಾತ್ಮಿಕ ಸಾಧಕನಿಗೆ ಗ್ರಂಥಗಳು ಯಾವ ರೀತಿ ಸಹಾಯಕವಾಗುವುವು? ಅದರ ಇತಿ ಮಿತಿಗಳನ್ನು ಅರಿತು ಬಳಸಿಕೊಳ್ಳುವುದು ಹೇಗೆ? ಅಗತ್ಯ-ಅನಗತ್ಯ ಗ್ರಂಥಗಳ ಆಯ್ಕೆ ಹೇಗೆ? ಗ್ರಂಥಗಳಲ್ಲಿ ಯಾವ ಯಾವ ಬಗೆಯ ಗ್ರಂಥಗಳನ್ನು ಯಾವ ಯಾವ ರೀತಿ ಬಳಸಿಕೊಳ್ಳಬೇಕು? — ಇವೇ ಮುಂತಾದ ಪ್ರಶ್ನೆಗಳಿಗೆ ನಾವು ಉತ್ತರ ಕಂಡುಕೊಳ್ಳಬೇಕು. ಸಾಧನೆಗೆ ಗ್ರಂಥಗಳು ಹೇಗೆ ಉಪಯುಕ್ತವಾಗುವುವು ಎಂಬು ದನ್ನು ಅರಿತುಕೊಂಡಾಗಲೇ ಅವುಗಳನ್ನು ಸಮರ್ಪಕವಾಗಿ ಬಳಸಿ ಕೊಳ್ಳುವುದು ಸಾಧ್ಯ.

## ಗ್ರಂಥಗಳ ರಚನೆ ಹಾಗೂ ಅವುಗಳ ಬಗೆಗಳು

ಇಂದು ನಾವು ಪ್ರಪಂಚದಲ್ಲಿ ಹಲವಾರು ಬಗೆಯ ಗ್ರಂಥ ಗಳನ್ನು ನೋಡುತ್ತೇವೆ. ಗ್ರಂಥಾಲಯಕ್ಕೆ ಹೋಗಿ ಕಪಾಟಿನ ಮುಂದೆ ನಿಂತು ನೋಡಿದರೆ, ನಮ್ಮ ಮುಂದೆ ತೆರೆದುಕೊಳ್ಳುವ ಪುಸ್ತಕ ಪ್ರಪಂಚವೆಂತಹುದು? ಸಾಮಾನ್ಯ ಜ್ಞಾನ, ಪ್ರಪಂಚದ ಇತಿಹಾಸ, ವಿಜ್ಞಾನದ ಶಾಖೆಗಳು, ತತ್ತ್ವಶಾಸ್ತ್ರ, ಧರ್ಮ-ಪುರಾಣ -ಆಧ್ಯಾತ್ಮಿಕತೆ, ಸಾಹಿತ್ಯ-ಭಾಷೆ, ಸಮಾಜ ವಿಜ್ಞಾನ, ತಂತ್ರಜ್ಞಾನ, ಕೃಷಿ, ವ್ಯವಸಾಯ, ವಾಣಿಜ್ಯ, ಕಲೆ-ಸಂಗೀತ-ನೃತ್ಯ, ಹಾಸ್ಯ- ವಿನೋದ, ಮಕ್ಕಳ ಸಾಹಿತ್ಯ, ಶಬ್ದಕೋಶ, ವಿಶ್ವಕೋಶ.. ಅಬ್ಬಬ್ಬಾ! ಎಷ್ಟೊಂದು ವಿಷಯಗಳು! ಇವನ್ನೆಲ್ಲ ನೋಡಿದರೆ, ಜಗತ್ತಿನ ಜ್ಞಾನಭಂಡಾರವನ್ನೆಲ್ಲ ಓದಿ ಮುಗಿಸುವುದು ಹಾಗಿರಲಿ, ಕೇವಲ ಪರಿಚಯ ಮಾಡಿಕೊಳ್ಳುವುದಕ್ಕೇ ಈ ಜನ್ಮ ಸಾಲದು ಎನ್ನಬೇಕು. ಅಂತೆಯೇ ಇವನ್ನೆಲ್ಲ ತಿರುವಿ ಹಾಕುತ್ತಿರಬೇಕಾದರೆ, ಇವುಗಳ ಲೇಖಕರ ಕಡೆಗೆ ನಮ್ಮ ಗಮನ ಹರಿಯದಿರದು.

ಲೇಖಕರು ಏಕೆ ಪುಸ್ತಕ ಬರೆಯುತ್ತಾರೆ? ‘ನಮಗೆ ತಿಳಿದದ್ದನ್ನು ಇತರರೂ ತಿಳಿಯಲಿ. ನಾನು ಅರಿತ ಜ್ಞಾನ ನನ್ನೊಂದಿಗೇ ಮರೆ ಯಾಗಬಾರದು. ಇತರರಿಗೂ ಅದರಿಂದ ಏನಾದರೂ ಲಾಭ ವುಂಟಾಗುವುದಿದ್ದರೆ ಆಗಲಿ’ ಎಂಬ ಭಾವನೆ ಹಲವರದು. ಪ್ರಾಚೀನ ಕಾಲದಿಂದಲೂ ಗ್ರಂಥರಚನೆ ಮಾಡಿದ್ದರ ಮೂಲ ಪ್ರೇರಣೆ ಇದೇ ಆಗಿರಬೇಕು. ಕೆಲವೊಮ್ಮೆ ಹಲವು ಮಂದಿ ಒತ್ತಾಯ ಮಾಡಿ, ‘‘ನೀವು ಈ ವಿಚಾರಗಳನ್ನೆಲ್ಲ ಬರೆದು ಪುಸ್ತಕ ರೂಪದಲ್ಲಿ ಹೊರತಂದರೆ ಇತರರಿಗೂ ಮಹದುಪಕಾರ ವಾದೀತು. ದಯವಿಟ್ಟು ಬರೆಯಿರಿ’’ ಎಂದದ್ದಕ್ಕಾಗಿ ಹಲವರು

ಗ್ರಂಥಗಳನ್ನು ಬರೆದರು. ಇನ್ನು ಕೆಲವರಿಗೆ ಬರೆಯುವುದೇ ಒಂದು ಚಪಲ. ಬರೆಯದೆ ಇರುವುದಕ್ಕಾಗದು. ಹೆಸರು, ಕೀರ್ತಿಗಾಗಿ ಬರೆದವರೂ ಇದ್ದಾರೆ. ಯಾವುದೋ ಅಸಾಮಾನ್ಯ ಕಾರಣದಿಂದ ಗ್ರಂಥರಚನೆಯಾದ, ಪುಸ್ತಕ ಬರೆಯಬೇಕಾಗಿ ಬಂದ ಪ್ರಸಂಗಗಳಿವೆ. ಇನ್ನು ವಿಶ್ವವಿದ್ಯಾಲಯ, ಪ್ರಕಾಶನ ಸಂಸ್ಥೆಗಳು ತಮ್ಮ ತಮ್ಮ ಉದ್ದೇಶಗಳಿಗಾಗಿ ಅನೇಕ ಗ್ರಂಥಗಳನ್ನು ರಚಿಸಲು ಕಾರಣವಾಗಿ, ಅವುಗಳನ್ನು ಪ್ರಕಟಿಸಿವೆ. ಒಟ್ಟಿನಲ್ಲಿ, ಗ್ರಂಥ ರಚನೆಗೂ ಅನೇಕ ಕಾರಣಗಳಿವೆ.

### 'ಶಾಸ್ತ್ರ' ಎಂದರೇನು?

ಸಾಮಾನ್ಯ ಅರ್ಥದಲ್ಲಿ ಶಾಸ್ತ್ರವೆಂದರೆ ಯಾವುದೇ ವಿಜ್ಞಾನ ಅಥವಾ science. ಯಾವುದಾದರೂ ಒಂದು ಜ್ಞಾನಶಾಖೆಗೆ ಸಂಬಂಧಿಸಿದಂತೆ ರಚಿತವಾದ ಗ್ರಂಥಗಳಿಗೆಲ್ಲ ಹಿಂದೆ 'ಶಾಸ್ತ್ರ'ವೆಂದೇ ಕರೆಯುತ್ತಿದ್ದರು. ಛಂದಶ್ಶಾಸ್ತ್ರ, ವ್ಯಾಕರಣಶಾಸ್ತ್ರ, ಅಲಂಕಾರ ಶಾಸ್ತ್ರ, ದರ್ಶನಶಾಸ್ತ್ರ, ತರ್ಕಶಾಸ್ತ್ರ, ಪಾಕಶಾಸ್ತ್ರ.. ಇತ್ಯಾದಿ. ಆದರೆ 'ಶಾಸ್ತ್ರ'ವೆಂದರೆ ಅದಕ್ಕೆ ಆಧ್ಯಾತ್ಮಿಕ ಮೂಲವನ್ನು ಹೇಳುತ್ತ, ಅದನ್ನು ಯಾರೋ ಋಷಿಗಳೇ ರಚಿಸಿದರೆಂದು ಉಲ್ಲೇಖಿಸುತ್ತ ಆ ಶಾಸ್ತ್ರವನ್ನು ದೈವೀಕರಿಸುವ ಬಗೆಯನ್ನು ನಾವು ಕಾಣುತ್ತೇವೆ. ಶಿಲ್ಪಶಾಸ್ತ್ರ, ವಾಸ್ತು, ಆಯುರ್ವೇದ, ಸಂಗೀತ ಇತ್ಯಾದಿಗಳಿಗೆಲ್ಲ ಮೂಲಪುರುಷ ಅಥವಾ ಮೂಲಗ್ರಂಥದ ರಚನಕಾರ ಒಬ್ಬ ಋಷಿಯೋ ಅಥವಾ ದೈವೀಪುರುಷನೋ ಆಗಿರುತ್ತಾನೆ. ಹೀಗೆ ಆ ಶಾಸ್ತ್ರವನ್ನು ದೈವೀಕರಿಸುವುದರಿಂದ, ಅದನ್ನು ಕಲಿಯುವವನಿಗೆ ಆ ಶಾಸ್ತ್ರದ ಮೇಲೆ ಹಾಗೂ ಶಾಸ್ತ್ರಗ್ರಂಥಗಳ ಮೇಲೆ ಶ್ರದ್ಧೆ, ಭಕ್ತಿ ಗೌರವಗಳು ಹುಟ್ಟುತ್ತವೆ; ಆ ಮೂಲಕ ಅವನ ಅಧ್ಯಯನ ಹೆಚ್ಚು ಫಲದಾಯಕವಾಗುತ್ತದೆ ಎಂಬ ಭಾವನೆ ಇದ್ದಿರಬೇಕು. ಇನ್ನು ಆಧ್ಯಾತ್ಮಿಕ-ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದ ಶಾಸ್ತ್ರಗಳ ಒಂದು ದೊಡ್ಡ ಗುಂಪೇ ಇದೆ. ಇದನ್ನು ಕುರಿತು ಸ್ವಾಮಿ ವಿವೇಕಾನಂದರು ಹೇಳುತ್ತಾರೆ:

''ಶಾಸ್ತ್ರ ಎಂಬ ಶಬ್ದಕ್ಕೆ ಅನಾದಿಯೂ ಅನಂತವೂ ಆದ 'ವೇದಗಳು' ಎಂದು ಅರ್ಥ. ಧಾರ್ಮಿಕ ಕರ್ತವ್ಯಗಳ ವಿಷಯದಲ್ಲಿ ವೇದಗಳೇ ಪ್ರಮಾಣ. ಪುರಾಣಾದಿ ಇತರ ಧಾರ್ಮಿಕ ಗ್ರಂಥಗಳನ್ನು ಸ್ಮೃತಿ ಎಂದು ಕರೆಯುತ್ತಾರೆ. ಸ್ಮೃತಿಯು ಎಲ್ಲಿಯವರೆಗೆ ವೇದಗಳಿಗೆ ವಿರೋಧವಾಗದೆ ಅವನ್ನು ಅನುಸರಿಸುವುದೋ ಅಲ್ಲಿಯವರೆಗೆ ಮಾತ್ರ ಅದು ಪ್ರಮಾಣ.

''ಇಂದ್ರಿಯಾತೀತ ಸತ್ಯಗಳ ದರ್ಶನವು ಪುರಾಣ, ಇತಿಹಾಸ ಮತ್ತು ಇತರ ಜನಾಂಗಗಳ ಧಾರ್ಮಿಕ ಗ್ರಂಥಗಳಲ್ಲಿ ಸ್ವಲ್ಪಮಟ್ಟಿಗೆ ಉಕ್ತವಾಗಿದ್ದರೂ ವೇದಗಳೇ ಎಲ್ಲಕ್ಕಿಂತಲೂ ಪುರಾತನವೂ, ಪೂರ್ಣವೂ, ಆಧ್ಯಾತ್ಮಿಕ ಸತ್ಯಗಳನ್ನು ಯಾವ ವಿಧದ ವಿಕಾರಗಳಿಗೂ ಒಳಪಡಿಸದೆ ನಿರೂಪಿಸುವಂಥವೂ ಆಗಿವೆ. ಆದುದರಿಂದ ಎಲ್ಲ ಶಾಸ್ತ್ರಗ್ರಂಥಗಳ ಅಗ್ರಸ್ಥಾನದಲ್ಲಿರಲು ಅರ್ಹವಾಗಿವೆ. ಮತ್ತು ಜಗತ್ತಿನ ಎಲ್ಲ ರಾಷ್ಟ್ರಗಳ ಗೌರವವನ್ನು ಸೆಳೆದುಕೊಂಡಿವೆ; ಆ ಎಲ್ಲ ದೇಶಗಳ ಶಾಸ್ತ್ರಗಳಿಗೂ ಯುಕ್ತಿಯ ತಳಹದಿಯನ್ನು ಒದಗಿಸಿವೆ.''

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ. ೫, ಪು. ೩೮೩-೮೪)*

### 'ವೇದ' ಮತ್ತು 'ವೇದಾಂತ'

ಸ್ವಾಮೀಜಿ ಹೇಳಿದಂತೆ ವೇದಗಳು ಶಾಸ್ತ್ರಗ್ರಂಥಗಳ ಅಗ್ರಸ್ಥಾನದಲ್ಲಿರಲು ಅರ್ಹತೆ ಹೊಂದಿವೆ; ಹಾಗೂ ಎಲ್ಲ ಧಾರ್ಮಿಕ ವಿಷಯಗಳಿಗೂ ಪ್ರಮಾಣಗಳಾಗಿವೆ. ಪುರಾತನ ಋಷಿಗಳು ಬಹಳ ದೀರ್ಘಕಾಲದಿಂದ ತಪಸ್ಸು, ಧ್ಯಾನಗಳಿಂದ ಕಂಡ ಸತ್ಯಗಳನ್ನು ಭಾಷಾರೂಪದಲ್ಲಿ ಹಿಡಿದಿಟ್ಟ ರಚನೆಗಳೇ ವೇದಗಳು. ಆಗ ಅವರು ಅವುಗಳನ್ನು ಬರೆದಿಡಲಿಲ್ಲ; ಛಂದೋಲಯ ಬದ್ಧವಾದ, ಕಾವ್ಯಮಯವಾದ ಆ 'ಸೂಕ್ತ'ಗಳನ್ನು ತಮ್ಮ ಶಿಷ್ಯಂದಿರಿಗೆ ಕಲಿಸಿಕೊಟ್ಟರು. ಹೀಗೆ ಬಾಯಿಂದ ಬಾಯಿಗೆ ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದ ವೇದಮಂತ್ರಗಳು ಸಾವಿರಾರು ವರ್ಷಗಳವರೆಗೂ ಮುಂದುವರಿಯುತ್ತ ಬಂದವು. ವ್ಯಾಕರಣ, ಛಂದಸ್ಸು ಮುಂತಾದ ವೇದಾಂಗಗಳ ನಿಯಮಗಳು ಈ ವೇದಮಂತ್ರಗಳು ಸ್ವಲ್ಪವೂ ಬದಲಾಗದಂತೆ ಉಳಿದುಕೊಂಡು ಬರಲು ಸಹಾಯ ಮಾಡಿದವು. ಎಲ್ಲವೂ ಜನರ ನೆನಪಿನ ಶಕ್ತಿಯನ್ನೇ ಅವಲಂಬಿಸಿತ್ತು. ಕಾಲಕ್ರಮದಲ್ಲಿ ಶಿಷ್ಯಂದಿರ ನೆನಪಿನ ಶಕ್ತಿ ಕ್ಷೀಣಿಸತೊಡಗಿ ಒಬ್ಬನಿಗೆ ಎಲ್ಲ ವೇದಮಂತ್ರಗಳನ್ನು ಕಲಿತು ಸ್ಮರಣೆಯಲ್ಲಿ ಹಿಡಿದಿಟ್ಟುಕೊಳ್ಳುವುದು ದುಸ್ತರವೆನ್ನಿಸಿದ್ದರಿಂದ ಇರಬೇಕು, ವೇದವ್ಯಾಸರು ವೇದಗಳನ್ನು ವಿಂಗಡಿಸಿದರು. ಅವುಗಳನ್ನು ಒಬ್ಬೊಬ್ಬ ಶಿಷ್ಯನಿಗೆ ಕಲಿಸಿ, ಅವರವರ ಪರಂಪರೆ ಮುಂದುವರೆಸಿಕೊಂಡು ಹೋಗಲು ಆದೇಶಿಸಿದರು.

ಹೀಗೆ ವೇದಗಳು ನಾಲ್ಕು ಎನಿಸಿಕೊಂಡವು. ಆದರೆ ವೇದಗಳಲ್ಲಿ ಎರಡು ಪ್ರಮುಖ ಭಾಗಗಳನ್ನು ಕಾಣುತ್ತೇವೆ: **ಕರ್ಮಕಾಂಡ** ಮತ್ತು **ಜ್ಞಾನಕಾಂಡ**. ಎಲ್ಲ ವೇದಗಳ ಆರಂಭದ ಭಾಗವೇ ಕರ್ಮಕಾಂಡ. ಯಜ್ಞಯಾಗಾದಿಗಳಿಗೆ ಹವಿಸ್ಸು ಅರ್ಪಿಸಲು ಬಳಕೆಯಾಗುವ ಮಂತ್ರಗಳೇ ಇಲ್ಲಿ ಅಧಿಕ. ಪ್ರಾರ್ಥನೆ ಉಪಾಸನೆ, ಸ್ತುತಿ ಇವುಗಳನ್ನು ಹೆಚ್ಚಾಗಿ ಅಲ್ಲಿ ಕಾಣುತ್ತೇವೆ. ನಡುನಡುವೆ ಗಹನವಾದ ಚಿಂತನೆ, ವಿಚಾರ, ತತ್ತ್ವಗಳೂ ಕಂಡುಬರುತ್ತವೆ. ಇನ್ನು ಎರಡನೇ ಭಾಗವಾದ ಜ್ಞಾನಕಾಂಡವನ್ನೇ 'ಉಪನಿಷತ್ತು'ಗಳು ಎನ್ನುತ್ತಾರೆ. ವೇದಗಳ (ನಾಲ್ಕೂ ವೇದಗಳ) ಕೊನೆಯ ಭಾಗವಾಗಿ ಬರುವ ಈ ಉಪನಿಷತ್ತುಗಳಲ್ಲಿ ವಿಚಾರ, ತರ್ಕ, ಚಿಂತನೆ ಕಂಡುಬರುತ್ತವೆ. ವೇದಗಳ ಕೊನೆಯಾದ್ದರಿಂದಲೂ, ವೇದಗಳ ಸಾರವೇ ಇಲ್ಲಿ ಹೆಪ್ಪುಗಟ್ಟಿರುವುದರಿಂದಲೂ ಇದನ್ನು 'ವೇದಾಂತ'ವೆಂದು ಕರೆದರು. ಪ್ರಧಾನವಾದ ಉಪನಿಷತ್ತುಗಳು ಹತ್ತು. ಈಶ, ಕೇನ, ಕಠ, ಮುಂಡಕ, ಮಾಂಡೂಕ್ಯ, ಪ್ರಶ್ನ, ಐತರೇಯ, ತೈತ್ತಿರೀಯ, ಛಾಂದೋಗ್ಯ ಹಾಗೂ ಬೃಹದಾರಣ್ಯಕ — ಇವೇ ಹತ್ತು ಉಪನಿಷತ್ತುಗಳು. ಪರಮ ಸತ್ಯದ ಅನ್ವೇಷಣೆ ಅಂತರಂಗದ ಶೋಧ, ಆತ್ಮ-ಬ್ರಹ್ಮ, ಬ್ರಹ್ಮಸಾಕ್ಷಾತ್ಕಾರ, ಮಾನ

ವನ ಸಂರಚನೆ, ವಿಶ್ವರಚನೆ, ಸಾಧನೆಯ ವಿಧಾನ ಹಾಗೂ ಆತ್ಮಾನುಭವ — ಈ ವಿಚಾರಗಳೇ ಇಲ್ಲಿ ಪ್ರಧಾನವಾಗಿವೆ.

'ವೇದಾಂತ'ವೆಂದರೆ ಉಪನಿಷತ್ತುಗಳಷ್ಟೇ ಅಲ್ಲ; ಈ ಪದದ ಅರ್ಥ ವಿಶಾಲವಾದುದು. ವೇದಾಂತ ಎಂದರೆ ಅದೊಂದು ಜ್ಞಾನ, ಒಂದು 'ದರ್ಶನ' ಅಥವಾ ಒಂದು ಬಗೆಯ ತತ್ತ್ವ-ಸಿದ್ಧಾಂತವನ್ನು ಪ್ರತಿಪಾದಿಸುವ ಪರಂಪರೆ. ಅದಕ್ಕೆ ಅಡಿಗಲ್ಲಾಗಿರುವ ಮೂರು ಪ್ರಧಾನ ಕೃತಿಗಳೇ 'ಪ್ರಸ್ಥಾನತ್ರಯ'ಗಳು (ಉಪನಿಷತ್ತು, ಬ್ರಹ್ಮಸೂತ್ರ ಮತ್ತು ಭಗವದ್ಗೀತೆ — ಇವು ಮೂರು ಗ್ರಂಥಗಳಿಗೆ ಪ್ರಸ್ಥಾನತ್ರಯವೆನ್ನುತ್ತಾರೆ). ಹೀಗೆ ಉಪನಿಷತ್ತುಗಳಿಗೆ 'ವೇದಾಂತ'ವೆಂದು ಕರೆದಿದ್ದರೂ ಇತರ ಹಲವು ಗ್ರಂಥಗಳನ್ನೂ ಆ ಪದ ಒಳಗೊಳ್ಳುತ್ತದೆ. ಅಷ್ಟೇ ಅಲ್ಲ, ಮೇಲೆ ಹೇಳಿದ ಮೂರು ಗ್ರಂಥಗಳಿಗೆ ಶ್ರೀ ಶಂಕರಾಚಾರ್ಯರೇ ಮೊದಲಾದವರು ಬರೆದ ವಿಸ್ತಾರವಾದ 'ಭಾಷ್ಯ' (ಚರ್ಚೆ, ವಿವರಣೆ, ತರ್ಕ, ಚಿಂತನೆಗಳನ್ನೊಳಗೊಂಡ ಪ್ರೌಢವಾದ ರಚನೆ) ಗಳಿವೆ, ಅವೂ 'ವೇದಾಂತ'ವೇ. ಇನ್ನು ಭಾಷ್ಯಗಳಿಗೆ ಮತ್ತೆ ಟೀಕೆ, ವಿವರಣೆ ಇಂಥ ಪ್ರತ್ಯೇಕ ರಚನೆಗಳು ಬಂದವು. ಅವೂ ವೇದಾಂತವೇ. ಇವೆಲ್ಲ ಸಾಕಷ್ಟು ವಿದ್ವತ್ಪೂರ್ಣವಾದ ರಚನೆಗಳು. ಸಾಮಾನ್ಯ ಜನರಿಗೂ ವೇದಾಂತದ ಶ್ರೇಷ್ಠ ವಿಚಾರಗಳು ತಲುಪಲಿ ಎಂಬ ಉದ್ದೇಶದಿಂದ ರಚಿತವಾದ 'ಪ್ರಕರಣ' ಗ್ರಂಥಗಳು, ಕ್ರಮಬದ್ಧವಾಗಿ ವೇದಾಂತ ವಿಚಾರವನ್ನು ನಿರೂಪಿಸುವ 'ವೇದಾಂತಸಾರ'ದಂಥಗ್ರಂಥಗಳು—ಇವೆಲ್ಲವನ್ನೂ 'ವೇದಾಂತ'ವೆನ್ನಲಾಗುತ್ತದೆ. ಇನ್ನೂ ಇತ್ತೀಚೆಗೆ ವೇದಾಂತ ತತ್ತ್ವಗಳನ್ನು ಕುರಿತಂತೆ ಇಂಗ್ಲಿಷ್, ಕನ್ನಡ, ಹಿಂದೀ ಹಾಗೂ ಇನ್ನಿತರ ಭಾಷೆಗಳಲ್ಲಿ ರಚಿತವಾದ ಗ್ರಂಥರಾಶಿಗೂ 'ವೇದಾಂತ' ಗ್ರಂಥಗಳೆನ್ನುತ್ತಾರೆ. ಹೀಗೆ 'ವೇದಾಂತ'ವೆಂದರೆ ಅದೊಂದು ತತ್ತ್ವವೂ ಹೌದು, ಅದನ್ನು ವಿವರಿಸುವ ಗ್ರಂಥರಾಶಿಯೂ ಹೌದು.

ಇದಲ್ಲದೆ ಆಧ್ಯಾತ್ಮಿಕ ವಿಚಾರಗಳನ್ನು ಒಳಗೊಂಡ ಇತರ ಹಲವಾರು ಗ್ರಂಥಗಳಿವೆ. ಉದಾಹರಣೆಗೆ : ಪುರಾಣಗಳು, ರಾಮಾಯಣ, ಮಹಾಭಾರತ ಇತ್ಯಾದಿ. ಅವತಾರ ಪುರುಷರ ಜೀವನ ಚರಿತ್ರೆ, ಅವರ ಉಪದೇಶಗಳು, ಸಾಧುಸಂತರ ಜೀವನ ಹಾಗೂ ಉಪದೇಶ ಇತ್ಯಾದಿ ಗ್ರಂಥಗಳೂ ಹೇರಳವಾಗಿ ರಚಿತವಾಗಿವೆ. ಇಷ್ಟು ವಿಶಾಲವಾದ ಶಾಸ್ತ್ರ ಹಾಗೂ ಇತರ ಗ್ರಂಥಗಳನ್ನೆಲ್ಲ ಒಬ್ಬ ಸಾಧಕನು ಓದಿ ಮುಗಿಸಬೇಕೆ, ಅಥವಾ ಅದು ಸಾಧ್ಯವೆ? ಎಂಬ ಪ್ರಶ್ನೆ ಇಲ್ಲಿ ಮೂಡಿಬರುವುದು ಸಹಜ. ಆಧ್ಯಾತ್ಮಿಕ ಜೀವನ ನಡೆಸಲು ಹಂಬಲವುಳ್ಳವರು ತಮಗೆ ಅತ್ಯಂತ ಉಪಯುಕ್ತವಾದ ಗ್ರಂಥಗಳನ್ನು ಓದಬಹುದು; ಆದರೆ ಅತ್ಯಂತ ವಿಸ್ತಾರವಾದ ಗ್ರಂಥರಾಶಿಗಳಲ್ಲಿ ಅತಿ ಮುಖ್ಯವಾದವುಗಳನ್ನು ಮಾತ್ರ ಗುರುತು ಹಾಕಿಕೊಳ್ಳುವುದು ಮುಖ್ಯ. ತಮ್ಮ ಜೀವನದ ಕೊನೆಯವರೆಗೂ ಓದುತ್ತ ಹೋಗಬಹುದು, ಒಂದೊಂದೇ ಗ್ರಂಥಗಳನ್ನು ಓದುತ್ತ ಆಧ್ಯಾತ್ಮಿಕವಿಚಾರವಾಗಿತಮ್ಮಜ್ಞಾನವನ್ನುವೃದ್ಧಿಗೊಳಿಸಬಹುದು. ಸಾಧಕರಿಗೆ ಅತಿಮುಖ್ಯವಾದ ಕೆಲವು ಗ್ರಂಥಗಳು ಇವು :

೧) **ವೇದ, ವೇದಾಂತ** (ನಾಲ್ಕು ವೇದಗಳು; ಉಪನಿಷತ್ತು, ಬ್ರಹ್ಮಸೂತ್ರ ಮತ್ತು ಗೀತೆ.)

೨) **ಪುರಾಣ, ಇತಿಹಾಸ** (ಮಹಾಭಾರತ, ರಾಮಾಯಣ ಇವಕ್ಕೆ 'ಇತಿಹಾಸ' ಎನ್ನುತ್ತಾರೆ.)

೩) ಅವತಾರ ಪುರುಷರ, ಸಾಧುಸಂತರ **ಜೀವನ ಚರಿತ್ರೆ** ಮತ್ತು **ಉಪದೇಶ**ಗಳು

೪) **ಷಡ್ದರ್ಶನ**ವೇ ಮುಂತಾದ ತತ್ತ್ವಗ್ರಂಥಗಳು.

೫) ಆಧ್ಯಾತ್ಮಿಕ ಸ್ಫೂರ್ತಿ ನೀಡುವ **ಸ್ತೋತ್ರ**ವೇ ಮುಂತಾದ ರಚನೆಗಳು.

ಗ್ರಂಥಗಳ ಉಪಯುಕ್ತತೆಯನ್ನು ಕುರಿತು ಶ್ರೀರಾಮಕೃಷ್ಣರು ಹೀಗೆ ಹೇಳುತ್ತಾರೆ:

"ಶಾಸ್ತ್ರ, ಗ್ರಂಥ ಇವೆಲ್ಲ ಭಗವಂತನನ್ನು ಪಡೆಯುವ ಮಾರ್ಗವನ್ನು ಮಾತ್ರ ತೋರಿಸಿಬಿಡುತ್ತದೆ. ಮಾರ್ಗವನ್ನು — ಉಪಾಯವನ್ನು ಅರಿತುಕೊಂಡ ಮೇಲೆ ಶಾಸ್ತ್ರ ಮತ್ತು ಗ್ರಂಥಗಳ ಆವಶ್ಯಕತೆಯೇನಿದೆ?

"ಬರಿಯ ಪಾಂಡಿತ್ಯದಿಂದ ಏನು ಪ್ರಯೋಜನ? ಪಂಡಿತನಿಗೆ ಅನೇಕ ಶಾಸ್ತ್ರಗಳು, ಅನೇಕ ಶ್ಲೋಕಗಳು ಗೊತ್ತಿರಬಹುದು; ಆದರೆ ಆತನಿಗೆ ಇನ್ನೂ ಸಂಸಾರದಲ್ಲಿ ಆಸಕ್ತಿ ನೆಲೆಸಿದ್ದರೆ, ಆತ ತನ್ನ ಅಂತರ್ಯದಲ್ಲಿ ಕಾಮಕಾಂಚನವನ್ನು ಇನ್ನೂ ಪ್ರೀತಿಸುತ್ತಾ ಇದ್ದರೆ... ಆತನ ಪಾಂಡಿತ್ಯ ಬರಿದೆ ವ್ಯರ್ಥ." *(ಶ್ರೀರಾಮಕೃಷ್ಣ ವಚನವೇದ, ಭಾಗ ೨, ಪು.೨೫೫-೫೬)*

ಶಾಸ್ತ್ರಗ್ರಂಥಗಳು ಸಾಧಕನ ಜೀವನಕ್ಕೆ ಮಾರ್ಗದರ್ಶನ ಮಾಡುತ್ತವೆ; ಅದರಿಂದ ಸಾಧಕನು ಭಗವಂತನೆಡೆಗೆ ಸಾಗಬೇಕು. ಆಗಲೇ ಶಾಸ್ತ್ರಗ್ರಂಥಗಳಲ್ಲಿ ಹೇಳಿದ ವಿಚಾರ, ತತ್ತ್ವಗಳು ಜೀವಂತವಾಗುತ್ತವೆ; ಸತ್ಯವು ಅವನ ಅಂತರಂಗದಲ್ಲಿ ಬೆಳಗುತ್ತದೆ. ಇಂದು ಶಾಸ್ತ್ರ, ಧರ್ಮ, ಅಧ್ಯಾತ್ಮ, ಸಾಧನೆ ಇವುಗಳ ಹೆಸರಿನಲ್ಲಿ ಲಕ್ಷಾಂತರ ಗ್ರಂಥಗಳು ಮಾರುಕಟ್ಟೆಯಲ್ಲಿ ಸಿಗುತ್ತವೆ. ಇವುಗಳಲ್ಲಿ ನಿಜವಾಗಿ ಆಧ್ಯಾತ್ಮಿಕ ಸಾಧನೆಗೆ ಸಹಾಯ ಮಾಡಬಲ್ಲ ಗ್ರಂಥಗಳು ಕೆಲವು ಮಾತ್ರ. ಅವು ಯಾವುವು ಎಂದು ತಿಳಿದು ಆಯ್ಕೆ ಮಾಡುವ ಸಾಮರ್ಥ್ಯ ಸಾಧಕನಿಗೆ ಅತ್ಯಗತ್ಯವಾಗಿ ಇರಬೇಕು. ಹಾಗೆಯೇ, ಅಂಥ ಗ್ರಂಥಗಳ ಉಪಯೋಗ ಮಾಡಿಕೊಳ್ಳುವುದ ಹೇಗೆ ಎಂಬುದನ್ನೂ ಸಾಧಕನು ಅರಿತುಕೊಳ್ಳಬೇಕು. ❁

## ಜುಲೈ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೧೨ | ಶುಕ್ರವಾರ | ಏಕಾದಶಿ |
| ೧೬ | ಮಂಗಳವಾರ | ಗುರುಪೂರ್ಣಿಮೆ |
| ೨೮ | ಭಾನುವಾರ | ಏಕಾದಶಿ |
| ೩೦ | ಮಂಗಳವಾರ | ಸ್ವಾಮಿ ರಾಮಕೃಷ್ಣಾನಂದ ಜಯಂತಿ |

# ವಿವಿಧ ಉಪದೇಶಗಳು



❁ ಎಲ್ಲರೂ ದೊಡ್ಡ ಮನುಷ್ಯನ ತೋಟವನ್ನು ನೋಡುವುದೇ ತಡ, ಬೆರಗಾಗಿ ಬಿಡುತ್ತಾರೆ — ಎಷ್ಟು ಸುಂದರವಾದ ಗಿಡಗಳು, ಎಷ್ಟು ಸುಂದರವಾದ ಹೂವುಗಳು, ಎಷ್ಟು ಸುಂದರವಾದ ಕೊಳಗಳು, ಎಷ್ಟು ಸುಂದರವಾದ ಬೈಠಕ್ ಖಾನೆ, ಅದರೊಳಗೆ ಎಷ್ಟು ಸುಂದರವಾದ ಪಟಗಳು ಇವುಗಳನ್ನೆಲ್ಲ ನೋಡಿಯೆ ಆಶ್ಚರ್ಯಚಕಿತರಾಗಿಬಿಡುತ್ತಾರೆ. ಆದರೆ ಎಲ್ಲಿ, ತೋಟದ ಯಜಮಾನ ಇದ್ದಾನಲ್ಲ ಆ ದೊಡ್ಡ ಮನುಷ್ಯ, ಆತ ಬೇಕೆಂದು ಇಚ್ಛಿಸುವವರು ಎಷ್ಟು ಜನ? ಆತ ಬೇಕು ಎನ್ನುವವರು ಎಲ್ಲೋ ಒಬ್ಬಿಬ್ಬರು. ವ್ಯಾಕುಲನಾಗಿ ಭಗವಂತನನ್ನು ಕರೆದರೆ ಆತನ ದರ್ಶನ ದೊರೆಯುತ್ತದೆ. ಆತನೊಡನೆ ನಾನು ನಿಮ್ಮೊಡನೆ ಈ ಮಾತುಕತೆಯಾಡುತ್ತಿರುವಂತೆ ಮಾತುಕತೆಯಾಡಬಹುದು. ಸತ್ಯವಾಗಿ ಹೇಳುತ್ತೇನೆ, ಆತನ ದರ್ಶನ ದೊರೆಯುತ್ತದೆ.

❁ ಸಾಧು ಸಂನ್ಯಾಸಿಗಳ ಪಟವನ್ನು ಮನೆಯಲ್ಲಿ ಇಡುವುದು ಶ್ರೇಯಸ್ಕರ. ಬೆಳಗಾಗೆದ್ದು ಬೇರೆಯವರ ಮುಖ ನೋಡದೆ ಸಾಧು-ಸಂನ್ಯಾಸಿಗಳ ಮುಖ ನೋಡಿ ಹಾಸಿಗೆ ಬಿಡುವುದು ಒಳ್ಳೆಯದು.

❁ ಮರಗಿಡಗಳನ್ನು ನೋಡಿದೊಡನೆಯೆ, ತಪೋವನದ ಋಷಿ ತಪಸ್ಸುಮಾಡುತ್ತಿದ್ದಾನೆ ಎಂಬುದರ ಭಾವನೆ ಉದ್ದೀಪನೆಯಾಗುತ್ತದೆ.

❁ ಹೀಗೆ ಮಾಡು ಎಂಬುದಾಗಿ ಒಬ್ಬ ಸರ್ವಸಂಗ ಪರಿತ್ಯಾಗಿ ಉಪದೇಶ ಕೊಡುವುದಾದರೆ ಅದು ಬಹಳ ಒಳ್ಳೆಯದಾಗುತ್ತದೆ. ಸಂಸಾರಿಯ ಉಪದೇಶ, ಆತ ಬ್ರಾಹ್ಮಣ ಪಂಡಿತನೇ ಆಗಿರಲಿ ಅಥವಾ ಇನ್ನೇನು ಬೇಕಾದರೂ ಆಗಿರಲಿ ಅದು ಸರಿಹೋಗದು.

❁ ಉನ್ನತನಾಗುವುದು! ಬೇಕಾಗಿರುವುದು ಅದು! ಶಿವನಾಥ ಒಮ್ಮೆ ಹೇಳಿದ. ಹೆಚ್ಚಾಗಿ ಭಗವಂತನ ಚಿಂತನೆ ಮಾಡಿದರೆ 'ಪ್ರಜ್ಞಾಶೂನ್ಯರಾಗಿಬಿಡುತ್ತಾರೆ' ಅಂತ. ನಾನು ಹೇಳಿದೆ, 'ಏನು ನೀನು ಹೇಳುವುದು? ಚೈತನ್ಯದ ಚಿಂತನೆಮಾಡಿ ಯಾರಾದರೂ ಅಚೈತನ್ಯರಾಗಿ ಹೋಗುತ್ತಾರೇನು? ಆತ ನಿತ್ಯ ಶುದ್ಧ ಬೋಧ ಸ್ವರೂಪ. ಆತನ ಬೋಧೆಯಿಂದಲೆ ಎಲ್ಲವೂ ಬೋಧವಾಗುತ್ತಿದೆ; ಆತನ ಚೈತನ್ಯದಿಂದಲೆ ಎಲ್ಲವೂ ಚೈತನ್ಯಮಯವಾಗಿದೆ' ಎಂದು.

❁ ಸಂಸಾರದಲ್ಲಿ ಇದ್ದು ಭಗವಂತನ ಸಾಕ್ಷಾತ್ಕಾರ ಪಡೆಯಬೇಕಾದರೆ ಒಂದು ಕೈಯಿಂದ ಭಗವಂತನ ಪಾದಪದ್ಮಗಳನ್ನು ಹಿಡಿದುಕೊಂಡಿರಬೇಕು. ಇನ್ನೊಂದು ಕೈಯಿಂದ ಕೆಲಸ ಕಾರ್ಯಗಳನ್ನು ಮಾಡುತ್ತಿರಬೇಕು, ಯಾವಾಗ ಕೆಲಸ ಕಾರ್ಯಗಳಿಂದ ಬಿಡುಗಡೆ ಹೊಂದುವೆಯೊ ಆಗ ಎರಡು ಕೈಗಳಿಂದಲೂ ಭಗವಂತನ ಪಾದಪದ್ಮಗಳನ್ನು ಹಿಡಿದುಕೊಳ್ಳಬೇಕು. ನಿರ್ಜನ ಪ್ರದೇಶದಲ್ಲಿ ವಾಸಮಾಡಬೇಕು, ಕೇವಲ ಆತನ ಚಿಂತನೆ ಮತ್ತು ಸೇವೆಯಲ್ಲಿಯೆ ನಿರತನಾಗಿರಬೇಕು.

❁ ಮಗು ಗಾಳೀಪಟ ಕೊಂಡುಕೊಳ್ಳಲೋಸುಗ ತಾಯ ಸೆರಗನ್ನು ಹಿಡಿದು ದುಡ್ಡು ಕೇಳುತ್ತದೆ — ತಾಯಿ ಬಹುಶಃ ಆಗ ಬೇರೆ ಹೆಂಗಸರೊಡನೆ ಹರಟೆ ಹೊಡೆಯುತ್ತಿರಬೇಕು. ಮೊದಲು ಆಕೆಗೆ ಕೊಡಲು ಇಚ್ಛೆಯೇ ಇಲ್ಲ. ಹೇಳುತ್ತಾಳೆ, 'ಕೊಡೋದಿಲ್ಲ. ನಿಮ್ಮ ತಂದೆ ಬೇಡ ಅಂತ ಹೇಳಿ ಹೋಗಿದ್ದಾರೆ. ಅವರು ಬಂದರೆ ನೋಡು ಹೇಳಿಬಿಡುತ್ತೇನೆ. ಒಡನೆಯೆ ಹೋಗಿ ಗಾಳೀಪಟ ಕೊಂಡುಕೊಂಡು ಕೈಯೊ ಕಾಲೊ ಏನೊ ಒಂದು ಮಾಡಿಕೊಂಡು ಬಂದುಬಿಡುತ್ತೀಯೆ' ಎಂದು. ಆಗ ಮಗು ಅಳಲು ಆರಂಭಿಸುತ್ತದೆ. ಏನು ಮಾಡಿದರೂ ಬಿಡಲೊಲ್ಲದು. ತಾಯಿ ತನ್ನ ಗೆಳತಿಯರಿಗೆ ಹೇಳುತ್ತಾಳೆ: 'ದಯವಿಟ್ಟು ಒಂದು ಸ್ವಲ್ಪ ಕುಳಿತುಕೊಂಡಿರಿ. ಈ ಮಗುವನ್ನು ಸ್ವಲ್ಪ ಸಮಾಧಾನಪಡಿಸಿ ಬರುತ್ತೇನೆ' ಎಂದು. ಬಳಿಕ ಬೀಗದ ಕೈ ತೆಗೆದುಕೊಂಡು ಹೋಗಿ 'ಕಟಕ್', 'ಕಟಕ್' ಎಂದು ಶಬ್ದಮಾಡಿ ಪೆಟ್ಟಿಗೆಯನ್ನು ತೆರೆದು ಮೂರು ಕಾಸನ್ನು ಬಿಸಾಕುತ್ತಾಳೆ. ನೀವೂ ಕೂಡ ತಾಯಿಯೊಡನೆ ಚಂಡಿಹಿಡಿಯಬೇಕು. ಆಗ ಆಕೆ ವಿಧಿಯಿಲ್ಲದೆ ಪ್ರತ್ಯಕ್ಷಳಾಗುತ್ತಾಳೆ.

❁ ಮನುಷ್ಯ ಭಗವಚ್ಚಿಂತನೆಯನ್ನೇನೊ ಮಾಡುತ್ತಾನೆ, ಆದರೆ ಆತನ ಇರುವಿಕೆಯಲ್ಲಿ ಆತನಿಗೆ ವಿಶ್ವಾಸವಿಲ್ಲ; ಮತ್ತೆ ಮತ್ತೆ ಭಗವಂತನನ್ನು ಮರೆಯುತ್ತಾನೆ, ಮತ್ತೆ ಸಂಸಾರದಲ್ಲಿ ಆಸಕ್ತನಾಗುತ್ತಾನೆ. ಇದು ಆನೆಗೆ ಮೈ ತೊಳೆದ ಹಾಗೆ; ಅದು ಮತ್ತೆ ಧೂಳು ಮತ್ತು ಬೂದಿಯನ್ನು ಮೈಗೆ ಮೆತ್ತಿಕೊಂಡುಬಿಡುತ್ತದೆ. 'ಮನಸ್ಸೆಂಬುದು ಒಂದು ಮದಿಸಿದ ಆನೆ.' ಆದರೆ ಆನೆಗೆ ಮೈ ತೊಳೆದ ಒಡನೆಯೆ ಅದನ್ನು ತೆಗೆದುಕೊಂಡು ಲಾಯದಲ್ಲಿ ಕಟ್ಟಿ ಹಾಕಿದರೆ ಅದು ಮತ್ತೆ ಧೂಳು ಮತ್ತು ಬೂದಿಯನ್ನು ಮೈಗೆ ಬಳಿದುಕೊಳ್ಳಲಾರದು. ಮನುಷ್ಯ ಮೃತ್ಯುಶಯ್ಯೆಯಲ್ಲಿ ಭಗವಂತನ ಚಿಂತನೆ ಮಾಡಿದರೆ ಆತನ ಮನಸ್ಸು ಶುದ್ಧವಾಗುತ್ತದೆ. ಬಳಿಕ ಆ ಮನಸ್ಸಿಗೆ ಮತ್ತೆ ಕಾಮಕಾಂಚನದಲ್ಲಿ ಆಸಕ್ತವಾಗಲು ಅವಕಾಶ ದೊರೆಯದು.

❁ ಆತ ಅಂತರ್ಯಾಮಿ, ಆತನಿಗೆ ಸರಳ ಮನಸ್ಸಿನಿಂದ, ಶುದ್ಧ ಮನಸ್ಸಿನಿಂದ ಪ್ರಾರ್ಥನೆ ಸಲ್ಲಿಸು. ಆತ ಎಲ್ಲವನ್ನೂ ತಿಳಿಸಿಕೊಡುತ್ತಾನೆ. ಅಹಂಕಾರವನ್ನು ತ್ಯಜಿಸಿ ಆತನಲ್ಲಿ ಶರಣಾಗತನಾಗು; ಎಲ್ಲಾ ದೊರೆಯುತ್ತದೆ.

ಶ್ರೀರಾಮಕೃಷ್ಣ ವಚನವೇದದಿಂದ

# ನಾ ಕಂಡಂತೆ ಶ್ರೀಮಾತೆ

ಮೂಲ ಬಂಗಾಳಿ : **ಸ್ವಾಮಿ ಗೌರೀಶ್ವರಾನಂದ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ಶ್ರೀಮಾತೆಯವರ ಸೇವಕರಾಗಿದ್ದುಕೊಂಡು ಅವರ ದೈನಂದಿನ ಜೀವನವನ್ನು ಹತ್ತಿರದಿಂದ ನೋಡುವ ಸೌಭಾಗ್ಯ ದೊರೆತ ಕೆಲವೇ ಮಂದಿ ಸಂನ್ಯಾಸೀ ಶಿಷ್ಯರಲ್ಲಿ ಒಬ್ಬರ ಸ್ಮೃತಿಚಿತ್ರ ಇಲ್ಲಿದೆ. ಶ್ರೀಮಾತೆಯವರ ಕೃಪೆಗೆ ಪಾತ್ರರಾಗಲು ಹಾಗೂ ಅವರ ಮಾನವಲೀಲೆಯನ್ನು ನೇರ ನೋಡಲು ಅವರಿಗೆ ಅವಕಾಶ ಲಭಿಸಿತು. ಲೇಖಕರು ಇಲ್ಲಿ ಶ್ರೀಮಾತೆಯವರೊಂದಿಗೆ ತಮಗಿದ್ದ ಅಪೂರ್ವ ಒಡನಾಟದ ಚಿತ್ರಣವನ್ನು ನೀಡಿದ್ದಾರೆ.

## ಭಾಗ ೧



**ನಾ**ನು ಏಳನೇ ತರಗತಿಯಲ್ಲಿ ಓದುತ್ತಿದ್ದಾಗ ನನಗೆ ಶ್ರೀಮಾತೆಯವರನ್ನು ಮೊದಲ ಬಾರಿ ದರ್ಶನ ಮಾಡುವ ಅವಕಾಶ ಲಭಿಸಿತು. ಅದು ಕ್ರಿ.ಶ.೧೯೧೮ ನೇ ಇಸವಿ. ಸತ್ಯವಿಚಾರ ಏನೆಂದರೆ, ಆಗ ನನಗೆ ತುಸು ಹತಾಶೆಯುಂಟಾಗಿತ್ತು. ನನ್ನ ಕಲ್ಪನೆಯಂತೆ ಶ್ರೀಮಾತೆ ಹೀಗೆ ವಿರಾಜಮಾನರಾಗಿದ್ದರು: ತುಂಬ ಚೆನ್ನಾಗಿ ಅಲಂಕೃತವಾದ ಒಂದು ಸಿಂಹಾಸನದಲ್ಲಿ ಅವರು ಕುಳಿತಿದ್ದಾರೆ; ಎರಡೂ ಬದಿಯಲ್ಲಿ ಸೇವಕಿಯರು ಚಾಮರ ಬೀಸುತ್ತಿದ್ದಾರೆ — ಈ ರೀತಿ. ಆದರೆ ನಾನೀಗ ನೋಡಿದಾಗ ಅವರು ಮಣ್ಣಿನ ಗೋಡೆಯ ಒಂದು ಹುಲ್ಲಿನ ಮನೆಯಲ್ಲಿ ವಾಸ ಮಾಡುತ್ತಿದ್ದರು. ಅದಲ್ಲದೆ, ಅವರು ಸ್ವತಃ ತಾವೇ ಕಸಬರಿಕೆ ಹಿಡಿದು ಅಂಗಳವನ್ನು ಗುಡಿಸುತ್ತಿದ್ದರು. ಇದರಿಂದ ಬಹಳ ಗೊಂದಲಕ್ಕೊಳಗಾಗಿ ನಾನು ಪೂಜ್ಯ ಜ್ಞಾನ್ ದಾ (ಸ್ವಾಮಿ ಜ್ಞಾನಾನಂದರು, ಇವರೊಂದಿಗೆ ನಾನು ಅಲ್ಲಿಗೆ ಹೋಗಿದ್ದೆ) ಹಾಗೂ ಗೋಪೇಶ್ ಅಣ್ಣ ( ಸ್ವಾಮಿ ಶಾರದೇಶಾನಂದರು) ಇವರ ಬಳಿಗೆ ಹೋಗಿ ಹೇಳಿದೆ: ''ಇಂಥ ಸಣ್ಣ ಪುಟ್ಟ ಕೆಲಸಗಳನ್ನು ಮಾಡಲು ಶ್ರೀಮಾತೆಯವರಿಗೆ ಸಹಾಯ ಮಾಡಲು ಇಲ್ಲಿ ಯಾರೂ ಇಲ್ಲವೆ?'' ಅದಕ್ಕೆ ಅವರು ಹೀಗೆ ಉತ್ತರಕೊಟ್ಟರು: ''ನೀನು ಬಂದು ಹೋಗುತ್ತಾ ಇರು. ಎಲ್ಲವೂ ನಿನಗೆ ಕ್ರಮೇಣ ಗೊತ್ತಾಗುವುದು.'' ಶ್ರೀಮಾತೆ ನಮ್ಮನ್ನು ನೋಡಿ, ''ಮಗೂ, ಸ್ವಲ್ಪ ನಿಲ್ಲು. ನಾನು ಈ ಕೆಲಸವನ್ನು ಮುಗಿಸಿ, ಕೈಕಾಲು ತೊಳೆದು ಬಂದು ಕುಳಿತುಕೊಳ್ಳುತ್ತೇನೆ, ಆಗ ಪ್ರಣಾಮ ಮಾಡುವಿಯಂತೆ'' ಎಂದರು. ನಾವು ಕಾಯುತ್ತ ನಿಂತೆವು. ಶ್ರೀಮಾತೆ ಕಸಬರಿಕೆಯನ್ನು ಇಟ್ಟು, ಕೈತೊಳೆದು ಬಂದು ತಮ್ಮ ಹಾಸಿಗೆಯ ಮೇಲೆ ಕುಳಿತರು. ನಾವು ಒಬ್ಬೊಬ್ಬರಾಗಿ ಪ್ರಣಾಮ ಮಾಡಿದೆವು. ಪ್ರಣಾಮ ಮಾಡುತ್ತಿದ್ದಾಗ ನಾನು ಗಮನಿಸಿದೆ, ಒಬ್ಬಾಕೆ ಹುಡುಗಿ ಶ್ರೀಮಾತೆಯವರ ಹಾಸಿಗೆಯಲ್ಲಿ ಮಲಗಿದ್ದಳು. ಅದು ನನಗೆ ಹಿಡಿಸಲಿಲ್ಲ. ನನ್ನ ಜೊತೆಯಲ್ಲಿ ಇದ್ದವರನ್ನು ಕೇಳಿದೆ — ''ಈ ಹುಡುಗಿ ಯಾರು? ಅವಳೇಕೆ ಶ್ರೀಮಾತೆಯವರ ಹಾಸಿಗೆಯಲ್ಲಿ ಮಲಗಿದ್ದಾಳೆ? ನೆಲದ ಮೇಲೆ ಹಾಸಿಗೆ ಹಾಸಿ ಮಲಗಬಾರದೆ?'' ಪೂಜ್ಯ ಜ್ಞಾನ್ ಅಣ್ಣ ನಮ್ಮನ್ನು ತಡೆದು ಹೀಗೆಂದರು — ''ಸುಮ್ಮನಿರಿ, ಆಮೇಲೆ ಎಲ್ಲ ತಿಳಿದೀತು.'' ಆ ಹುಡುಗಿಯೇ ಶ್ರೀಮಾತೆಯವರ ಪ್ರೀತಿಪಾತ್ರಳಾದ ಸೊಸೆ, ರಾಧು.

ಅವರಿಬ್ಬರೂ ಶ್ರೀಮಾತೆಯವರಿಗೆ ಪ್ರಣಾಮ ಮಾಡಿದ ನಂತರ ನಾನು ಪ್ರಣಾಮ ಮಾಡಿದೆ; ಆಗ ಶ್ರೀಮಾತೆ ಕೇಳಿದರು: ''ಈ ಹುಡುಗ ಯಾರು?'' ಅದಕ್ಕೆ ಅವರು ಉತ್ತರಿಸಿದರು, ''ಈ ಹುಡುಗ ಬದನ್‌ಗಂಜ್ ಶಾಲೆಯಲ್ಲಿ ಕಲಿಯುತ್ತಿದ್ದಾನೆ.'' ಅದನ್ನು ಕೇಳಿದ ಶ್ರೀಮಾತೆ ಕೇಳಿದರು, ''ಪ್ರಬೋಧನ ಶಿಷ್ಯನೆ?'' ನನ್ನ ಶಾಲೆಯ ಮುಖ್ಯೋಪಾಧ್ಯಾಯರ ಹೆಸರು ಪ್ರಬೋಧ ಚಂದ್ರ ಚಟ್ಟೋಪಾಧ್ಯಾಯ ಎಂದಾಗಿತ್ತು. 'ನಮ್ಮ ಹೆಡ್‌ಮಾಸ್ಟರ್ ಶ್ರೀಮಾತೆಯವರಿಗೆ ಹೇಗೆ ಪರಿಚಯ?' ಎಂದು ನಾನು ಮನಸ್ಸಿನಲ್ಲಿಯೇ ಯೋಚಿಸಿದೆ. ಅವರು ಈ ಊರಲ್ಲೆಲ್ಲ ಬಹಳ ದೊಡ್ಡ

ವಿದ್ವಾಂಸರು ಹಾಗೂ ಬುದ್ಧಿವಂತರೆಂದು ಪ್ರಸಿದ್ಧರು, ಅದಕ್ಕಾಗಿಯೇ ಶ್ರೀಮಾತೆಯವರಿಗೆ ಅವರ ಪರಿಚಯವಿದೆ ಎಂದು ನಾನೇ ಉತ್ತರ ಕಂಡುಕೊಂಡೆ. ನಮ್ಮ ಮುಖ್ಯೋಪಾಧ್ಯಾಯರು ತಮ್ಮ ಪತ್ನಿಯೊಂದಿಗೆ ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆದಿದ್ದರೆಂದು ಅನಂತರ ನನಗೆ ತಿಳಿದುಬಂತು.

ಶ್ರೀಮಾತೆಯವರ ದರ್ಶನ ಮಾಡಿ, ಮನೆಗೆ ಮರಳುವ ಹೊತ್ತಿಗೆ ಶ್ರೀಮಾತೆ ಪ್ರೀತಿಯಿಂದ ಹೇಳಿದರು, ''ಮಗೂ, ಮತ್ತೆ ಬಾ.'' ಅಂದಿನಿಂದ ಪ್ರತಿ ಶನಿವಾರಗಳಲ್ಲಿ ಜಯರಾಮಬಾಟಿಗೆ ಹೋಗಲು, ಮತ್ತು ಶ್ರೀಮಾತೆಯವರ ದರ್ಶನ ಪಡೆಯಲು ನನ್ನ ಜೀವ ವ್ಯಾಕುಲಗೊಳ್ಳುತ್ತಿತ್ತು. ಪ್ರತಿ ಶನಿವಾರ ಶಾಲೆಗೆ ಹೋಗುವಾಗ ನಾನು ಒಂದು ಜೊತೆ ಬಟ್ಟೆಬರೆ, ಟವೆಲ್, ಸೋಮವಾರಕ್ಕೆ ಬೇಕಾದ ಪಾಠಪುಸ್ತಕಗಳು ಇವನ್ನೆಲ್ಲ ಕೊಂಡೊಯ್ಯುತ್ತಿದ್ದೆ. ರಜೆ ಸಿಕ್ಕಿದ ಕೂಡಲೇ ಜಯರಾಮಬಾಟಿಗೆ ಹೋಗಿಬಿಡುತ್ತಿದ್ದೆ. ಹೀಗೆ ಕೆಲವು ಬಾರಿ ಹೋಗುವಷ್ಟರಲ್ಲೇ ಶ್ರೀಮಾತೆಯವರಿಗೆ ತುಂಬ ಪರಿಚಿತನಾಗಿಬಿಟ್ಟೆ.

ಶ್ರೀಮಾತೆಯವರ ಲಜ್ಜಾಶೀಲ ಸ್ವಭಾವ ಅಸಾಧಾರಣವಾದುದು. ಸ್ವಾಮೀಜಿ, ರಾಜಾ ಮಹಾರಾಜ್, ಶರತ್ ಮಹಾರಾಜ್, ಮಹಾಪುರುಷ ಮಹಾರಾಜ್ ಮೊದಲಾದವರನ್ನೆಲ್ಲ ಶ್ರೀಮಾತೆ, 'ಮಗೂ' ಎಂದೇ ಕರೆಯುತ್ತಿದ್ದರು. ಆದರೆ ಅವರ ಮುಂದೆ ಯಾವಾಗಲೂ ತಲೆಯ ಮೇಲೆ ಸೆರಗು ಹಾಕಿ ಮರೆ ಮಾಡಿಕೊಳ್ಳುತ್ತಿದ್ದರು. ಸೆರಗಿನ ಒಳಗಿನಿಂದಲೇ ಮೆಲುಧ್ವನಿಯಿಂದ ಮಾತನಾಡುತ್ತಿದ್ದರು. ಅನೇಕ ಸಲ ಯೋಗಿನ್ ಮಾ ಅಥವಾ ಗೋಲಾಪ್ ಮಾ ಅವರ ಮಾತನ್ನು ಮತ್ತೊಂದು ಬಾರಿ ಗಟ್ಟಿಯಾಗಿ ಹೇಳುತ್ತಿದ್ದರು. ಶರತ್ ಮಹಾರಾಜ್ ಶ್ರೀಮಾತೆಯವರಿಗೆ ಪ್ರಣಾಮ ಮಾಡಿ ವರಾಂಡಕ್ಕೆ ಬಂದು, ದೂರಿಡುವ ಧ್ವನಿಯಿಂದ, ''ಅವರ ಮಾವನೇನೋ ಎಂಬಂತೆ ನನ್ನನ್ನು ನೋಡುತ್ತಿದ್ದಾರೆ '' ಎನ್ನುತ್ತಿದ್ದರು. ನಾನು ವಯಸ್ಸಿನಲ್ಲಿ ಸಣ್ಣವನಾಗಿದ್ದೆ; ನಾನು ಇನ್ನೂ ಚಿಕ್ಕವನಾಗಿಯೇ ಕಾಣಿಸಿಕೊಳ್ಳುತ್ತಿದ್ದೆ. ಈ ಕಾರಣದಿಂದಲೇ ಶ್ರೀಮಾತೆಯವರು ನನ್ನ ಮುಂದೆ ತಲೆಯ ಮೇಲೆ ಸೆರಗು ಹಾಕಿಕೊಳ್ಳುತ್ತಿರಲಿಲ್ಲ. ಆದ್ದರಿಂದ ನನಗೆ ಶ್ರೀಮಾತೆಯವರನ್ನ ಚೆನ್ನಾಗಿ ನೋಡುವ ಸೌಭಾಗ್ಯ ಲಭಿಸಿತ್ತು. ಇದಲ್ಲದೆ, ಶ್ರೀಮಾತೆಯವರ ಕಾಲುಗಳಿಗೆ ವಾತದ ತೊಂದರೆಯಿತ್ತು; ಅವರ ಕಾಲುಗಳಿಗೆ ವಾತದ ತೈಲವನ್ನು ಹಚ್ಚಿ ಮಾಲಿಶ್ ಮಾಡುವ ಸೌಭಾಗ್ಯವೂ ನನಗೆ ಲಭಿಸಿತ್ತು. ಮಾಲಿಶ್ ಮಾಡುವಾಗ ನಾನು ನೋಡಿದ್ದೆ — ಶ್ರೀಮಾತೆಯವರ ಪಾದಗಳು ಅತ್ಯಂತ ಕೋಮಲವಾಗಿದ್ದವು. ಅವು ನಸುಗುಲಾಬಿ ಬಣ್ಣದಿಂದ ಕೂಡಿದ್ದವು. ಆದರೂ ಶ್ರೀಮಾತೆಯವರು ಕಾಮಾರಪುಕುರ ಅಥವಾ ಜಯರಾಮಬಾಟಿಯಿಂದ ದಕ್ಷಿಣೇಶ್ವರಕ್ಕೆ; ಅಂತೆಯೇ ದಕ್ಷಿಣೇಶ್ವರದಿಂದ ಕಾಮಾರಪುಕುರ–ಜಯರಾಮಬಾಟಿಗೆ ನಡೆದೇ ಹೋಗುತ್ತಿದ್ದರು. ಅವರು ತಮ್ಮ ಜೀವನದಲ್ಲಿ ಎಂದೂ ಪಾದರಕ್ಷೆ ಧರಿಸಿರಲಿಲ್ಲ. ಒಂದು ದಿನ ಎಣ್ಣೆ ಹಚ್ಚಿ ಮಾಲಿಶ್ ಮಾಡುವಾಗ ನನ್ನ ಮನಸ್ಸಿನಲ್ಲೊಂದು ಆಲೋಚನೆ ಬಂತು: ಶ್ರೀಮಾತೆಯವರ ಕಾಲುಗಳ ವಾತ ನನ್ನ ಕಾಲುಗಳಿಗೇ ಬಂದು ಬಿಟ್ಟರೆ ಚೆನ್ನಾಗಿರುತ್ತದೆ; ಶ್ರೀಮಾತೆ ಚೆನ್ನಾಗಿರುತ್ತಾರಲ್ಲ, ಅಂತ. ಹೀಗೆ ಭಾವಿಸಿಕೊಳ್ಳುತ್ತ ನಾನು ಶ್ರೀಮಾತೆಯವರ ಕಾಲುಗಳ ಮೇಲೆ ಕೈಯಿಟ್ಟು, ಅನಂತರ ಅದೇ ಕೈಯಿಂದ ನನ್ನ ಮೊಣಕಾಲನ್ನು ಸ್ಪರ್ಶಿಸಿದೆನೋ ಇಲ್ಲವೋ, ಶ್ರೀಮಾತೆ ನನ್ನ ಗಲ್ಲವನ್ನು ಸ್ಪರ್ಶಿಸಿ, ಕೈಯಿಂದ ಚುಂಬಿಸುತ್ತ ಹೇಳಿದರು: ''ಛಿ! ಛಿ! ಅದೇನು ಹಾಗೆಲ್ಲ ಆಲೋಚನೆ ಮಾಡುತ್ತಿದ್ದೀಯಾ? ನೀವೆಲ್ಲ ಬದುಕಿ ಉಳಿಯಬೇಕು. ಶ್ರೀರಾಮಕೃಷ್ಣರ ಕಾರ್ಯವನ್ನು ನೀವು ಎಷ್ಟೊಂದು ಮಾಡಬೇಕಾಗಿದೆ! ನಾನು ಮುದುಕಿಯಾದೆ. ಇನ್ನೆಷ್ಟು ದಿನ ಬದುಕಬಲ್ಲೆ!''

ನಾನು ಶ್ರೀಮಾತೆಯವರೊಂದಿಗೆ ಕುಳಿತು ತರಕಾರಿ ಹೆಚ್ಚುತ್ತಿದ್ದೆ. ಅವರಿಗೆ ಒಲೆ ಹಚ್ಚಿ ಕೊಡುತ್ತಿದ್ದೆ. ಗೋಧಿ ಹಿಟ್ಟು, ಮೈದಾ ಇವನ್ನೆಲ್ಲ ಕಲಸಿ, ಚಪಾತಿ, ಪೂರಿ ಲಟ್ಟಿಸಿಕೊಡುತ್ತಿದ್ದೆ. ಅವರೊಂದಿಗೆ ಕುಳಿತು ಬೀಡಾ ತಯಾರು ಮಾಡಿ ಇಡುತ್ತಿದ್ದೆ. ಹೂ, ತುಳಸಿ, ಬಿಲ್ವಪತ್ರೆ, ಗರಿಕೆ ಇವನ್ನೆಲ್ಲ ಸಂಗ್ರಹಿಸಿ ತಂದು, ಗಂಧ ತೇಳೆದು ಅವರ ಪೂಜೆಗೋಸ್ಕರ ಪುಷ್ಪಪಾತ್ರೆಯಲ್ಲಿ ಅವುಗಳನ್ನೆಲ್ಲ ಜೋಡಿಸಿ ಇಡುತ್ತಿದ್ದೆ. ಹಣ್ಣುಗಳಿದ್ದರೆ ಕತ್ತರಿಸಿ ಇಡುತ್ತಿದ್ದೆ. ಆಗಂತೂ ಜಯರಾಮಬಾಟಿಯಲ್ಲಿ ಹಣ್ಣುಹಂಪಲುಗಳು ಖರೀದಿಗೆ ಸಿಗುತ್ತಿರಲಿಲ್ಲ. ಹಣ್ಣುಗಳ ನಡುವೆ ಕುಂಬಳಕಾಯಿ, ಗಡ್ಡೆಗೆಣಸುಗಳ ನಡುವೆ ಆಲೂಗಡ್ಡೆ ಇರುತ್ತಿದ್ದವು. ಒಂದು ಸಣ್ಣ ಅಂಗಡಿ ಮಾತ್ರ ಅಲ್ಲಿ ಇತ್ತು. ಅಂಗಡಿ ಎಷ್ಟು ಸಣ್ಣದಾಗಿತ್ತೆಂದರೆ, ಒಂದು ಸಲ ಶ್ರೀಮಾತೆ ಎರಡೂವರೆ ಪಾವು ಗಸಗಸೆ ಕೊಂಡುಕೊಳ್ಳಲು ಕಳುಹಿಸಿದ್ದರು. ಗಸಗಸೆ ಕೇಳಿದಾಗ ಅಂಗಡಿಯವನು ಹೇಳಿದ, ''ನಿನಗೇನೇ ಎರಡೂವರೆ ಪಾವು ಗಸಗಸೆ ಕೊಟ್ಟುಬಿಟ್ಟರೆ ನನ್ನ ಬಳಿ ದಿನಸಿ ಏನು ಉಳಿದೀತು? ಅಂಗಡಿಯಲ್ಲಿ ಇರುವುದೇ ಎರಡೂವರೆ ಪಾವು ಅಷ್ಟೇ.'' ಈಗಲಾದರೋ ಹಲವಾರು ದೊಡ್ಡ ಅಂಗಡಿಗಳು ಬಂದಿವೆ. ಶ್ರೀಮಾತೆ ನನಗೆ ಒಂದೇ ಬಾರಿಗೆ ಎರಡು ಬೀಡಾ ಕೊಡುತ್ತಿದ್ದರು. ಹೆಂಗಸರ ಮುಂದೆ ಅವರು ಹೇಳುತ್ತಿದ್ದರು: ''ರಾಮುಮಯ ವೀಳ್ಯ ಹಾಕಿಕೊಳ್ಳುವುದನ್ನು ನೋಡಲು ತುಂಬ ಚೆನ್ನಾಗಿರುತ್ತದೆ. ಕಪ್ಪು ಹುಡುಗ, ಅವನ ತುಟಿಗಳೆರಡೂ ಕೆಂಪಾಗಿ ಬಿಡುತ್ತವೆ. ಕಲ್ಲಿದ್ದಲಿನ ಪುಡಿಗೆ ಬೆಂಕಿ ಹತ್ತಿಸಿದ ಹಾಗೆ ನನಗನ್ನಿಸುತ್ತಿದೆ.''

ಶ್ರೀಮಾತೆಯವರ ಬಳಿಗೆ ಮಂತ್ರದೀಕ್ಷೆ ಪಡೆಯಲು ತುಂಬಾ ಮಂದಿ ಬರುತ್ತಿದ್ದುದನ್ನು ನಾನು ಕಂಡಿದ್ದೆ. ಸ್ವಲ್ಪ ದಿನಗಳ ನಂತರ ಅವರಿಂದ ಮಂತ್ರದೀಕ್ಷೆ ಪಡೆಯಬೇಕೆಂದು ನನಗೂ ಅನ್ನಿಸಿತು. ಆದರೆ ನನಗೆ ಸಂದೇಹ, ಯಾರಿಗೆ ಗೊತ್ತು — ನಾನಿನ್ನೂ ಚಿಕ್ಕ ಹುಡುಗ; ಹದಿನಾರು ಹದಿನೇಳು ವರ್ಷ ವಯಸ್ಸು; ದೀಕ್ಷೆ ನೀಡಲು ಶ್ರೀಮಾತೆ ಒಪ್ಪುವರೋ ಇಲ್ಲವೋ! ಶ್ರೀಮಾತೆಯವರ ವೃದ್ಧ ಶಿಷ್ಯರೊಬ್ಬರು ಅವರ ಸೇವೆ ಮಾಡಿಕೊಂಡು ಜಯರಾಮ

ಬಾಟಿಯಲ್ಲಿದ್ದರು; ಅವರ ಮಗ ವಕೀಲನಾಗಿದ್ದ. ಅವನೊಂದಿಗೆ ನಾನು ಈ ವಿಷಯವಾಗಿ ಮಾತುಕತೆ ನಡೆಸಿದೆ. ಅವರಿಗೆ ನಾನೆಂದೆ, ''ದೀಕ್ಷೆ ಪಡೆಯಬೇಕೆಂದೇ ನನ್ನ ಆಸೆ. ನೀವಂತೂ ಯಾವಾಗಲೂ ಈಗ ಶ್ರೀಮಾತೆಯವರ ಬಳಿಯಲ್ಲೇ ಇದ್ದೀರಿ. ಶ್ರೀಮಾತೆ ನನಗೆ ದೀಕ್ಷೆ ನೀಡಬಹುದೆಂದು ನಿಮಗೆ ಅನ್ನಿಸುತ್ತದೆಯೆ?'' ಅದಕ್ಕೆ ಅವರೆಂದರು: ''ತಮ್ಮಾ, ನಿನಗೆ ದೀಕ್ಷೆ ನೀಡುವರೆಂದೇ ನನಗನ್ನಿಸುತ್ತದೆ. ಏಕೆಂದರೆ, ನೀನು ಯಾವುದೋ ಕಾರಣದಿಂದ ಶನಿವಾರ ಸಾಯಂಕಾಲ ಬಾರದಿದ್ದರೆ ಶ್ರೀಮಾತೆ ಇಪ್ಪತ್ತು ಸಲ ನಿನ್ನ ಬಗ್ಗೆ ಕೇಳುತ್ತಾರೆ, 'ರಾಮಮಯ (ನನ್ನ ಪೂರ್ವಾಶ್ರಮದ ಹೆಸರು 'ರಾಮಮಯ') ಯಾಕೆ ಬರಲಿಲ್ಲ? ಹುಡುಗನಿಗೇನಾದರೂ ಜ್ವರ ಬಂದಿರಬಹುದೆ?' ಅಂತ. ಸ್ವಲ್ಪ ಹೊತ್ತಿನ ನಂತರ ಹೇಳುತ್ತಾರೆ, 'ಒಳ್ಳೆಯ ತಿಳುವಳಿಕೆಯ, ಬುದ್ಧಿವಂತ ಹುಡುಗ ಅವನು. ಪಾಠ ಓದುವುದರಲ್ಲೇ ಹೆಚ್ಚು ಗಮನ ಕೊಡುತ್ತಿರಬೇಕು. ಸಮೀಪದಲ್ಲೇ ಪರೀಕ್ಷೆಯೇನೋ ಇರಬೇಕು. ಅದರಿಂದಾಗಿಯೇ ಅವನು ತಾಯಿಯನ್ನು ಮರೆತುಬಿಟ್ಟಿದ್ದಾನೆ' ಮುಂತಾಗಿ. ಹೀಗೆ ಪ್ರತಿವಾರವೂ ಅವರು ನಿನ್ನ ಬಗ್ಗೆ ಚಿಂತೆ ಮಾಡುತ್ತಾರೆ. ಅವರು ನಿನ್ನನ್ನು ಇಷ್ಟೊಂದು ಪ್ರೀತಿಸುತ್ತಿರುವಾಗ ನಿನಗೆ ಖಂಡಿತ ದೀಕ್ಷೆ ಕೊಟ್ಟೇ ಕೊಡುತ್ತಾರೆ. ಆದರೂ ಅವರು, 'ಇನ್ನೂ ಸ್ವಲ್ಪ ದೊಡ್ಡವನಾದ ಮೇಲೆ ಕೊಡುತ್ತೇನೆ' ಎಂದರೆ ಆ ಮಾತು ಬೇರೆ.'' ನಾನಾದರೋ ದೊಡ್ಡವನಾಗಿದ್ದೆ. ಹುಡುಗನೆಂದು ನನ್ನನ್ನು ಚಿಕ್ಕ ಹುಡುಗನಂತೆ ಕಾಣುತ್ತಿದ್ದರು.

ಅಂತೂ ಕೊನೆಗೆ ಶ್ರೀಮಾತೆಯವರಿಗೆ ಈ ಕುರಿತು ತಿಳಿಸಿದಾಗ ಅವರು ತುಂಬಾ ಆನಂದಗೊಂಡರು. ''ಸರಿ, ನೀನು ದೀಕ್ಷೆ ಪಡೆದುಕೊಳ್ಳುವುದಿದ್ದರೆ, ಆಸನವನ್ನು ಹರಡಿ, ಠಾಕೂರರಿಗೆ ಪ್ರಣಾಮ ಮಾಡಿ ಬಂದು ಇಲ್ಲಿ ಕುಳಿತುಕೋ'' ಎಂದರು. ಶ್ರೀಮಾತೆಯವರ ಆಸನವಲ್ಲದೆ, ಅಲ್ಲಿ ಇನ್ನೂ ಎರಡು ಕಂಬಳಿಯ ಆಸನಗಳಿದ್ದವು. ಯಾವಾಗಲಾದರೂ ಗಂಡಹೆಂಡಿರು ಜೊತೆಗೆ ಮಂತ್ರದೀಕ್ಷೆ ಪಡೆದುಕೊಳ್ಳುವುದಿದ್ದರೆ, ಆ ಎರಡೂ ಆಸನಗಳನ್ನು ನಾನು ಅಲ್ಲಿ ಹರಡುತ್ತಿದ್ದೆ. ಅವೆರಡರಲ್ಲಿ ಒಂದು ಆಸನವನ್ನು ತೆಗೆದುಕೊಂಡು, ಶ್ರೀಮಾತೆಯವರ ಮುಂದೆ ಹರಡಿದೆ. ಅನಂತರ ಠಾಕೂರರಿಗೆ ಹಾಗೂ ಶ್ರೀಮಾತೆಯವರಿಗೆ ಪ್ರಣಾಮ ಮಾಡಿ, ಆಸನದಲ್ಲಿ ಕುಳಿತೆ. ಶ್ರೀಮಾತೆ ಕೋಶದಲ್ಲಿದ್ದ (ನೀರು ತುಂಬಲು ಬಳಸುವ ಪೂಜಾಪಾತ್ರೆಯೇ 'ಕೋಶ') ನೀರನ್ನು ಕುಶಿ (ಚಮಚ — ಪೂಜೆಗೆ ಬಳಸುವುದು)ಯಿಂದ ತೆಗೆದುಕೊಂಡು, ನನ್ನ ಮೈಗೆ ಚಿಮುಕಿಸುತ್ತ ಹೇಳಿದರು: ''ಕಳೆದ ಜನ್ಮಗಳ ಪಾಪಗಳೆಲ್ಲವೂ ನಾಶವಾಗಿ ಹೋಗಲಿ. ಈ ಜನ್ಮದಲ್ಲಿ ತಿಳಿದೋ, ತಿಳಿಯದೆಯೋ ಮಾಡಿದ ಪಾಪಗಳೆಲ್ಲವೂ ನಾಶವಾಗಿ ಹೋಗಲಿ.'' ಹೀಗೆ ಹೇಳಿ ಶ್ರೀಮಾತೆ ನನ್ನ ದೇಹವನ್ನು ಶುದ್ಧಗೊಳಿಸಿದರು. ಅನಂತರ ಒಂದು ದೇವತೆಯ ಹೆಸರನ್ನು ಉಚ್ಚರಿಸಿ ಹೇಳಿದರು, ''ನಿನ್ನ ಇಷ್ಟ ಇದುವೇ ಅಲ್ಲವೆ?'' ನನಗೆ ಅರ್ಥವಾಗಲಿಲ್ಲವೆಂದು ಭಾವಿಸಿರಬೇಕು, ಮತ್ತೆ ಹೇಳಿದರು, ''ಬೇರೆ ಎಲ್ಲರಿಗಿಂತಲೂ ಇವರ ಮೇಲೆಯೇ ನಿನಗೆ ಹೆಚ್ಚು ಭಕ್ತಿ, ಶ್ರದ್ಧೆಗಳಿವೆ, ಪ್ರೀತಿಯಿದೆ, ಅಲ್ಲವೆ? ಈ ದೇವರ ಮಂತ್ರವನ್ನೇ ನಿನಗೆ ನೀಡುತ್ತೇನೆ'' ಎಂದರು. ಆಗ ನಾನಂದೆ, ''ಅಮ್ಮಾ, ನೀವು ಸರಿಯಾಗಿ ಗ್ರಹಿಸಿದ್ದೀರಿ. ಉಳಿದೆಲ್ಲರಿಗಿಂತಲೂ ನನಗೆ ಆ ದೇವರ ಮೇಲೆಯೇ ಹೆಚ್ಚು ಶ್ರದ್ಧೆ, ಭಕ್ತಿಯಿದೆ. ಆದರೆ ಈಗ ಶ್ರೀರಾಮಕೃಷ್ಣರ ಬಗೆಗಿನ ಪುಸ್ತಕಗಳನ್ನು ಓದಿ ಎಲ್ಲ ದೇವದೇವತೆಗಳೂ ಒಂದೇ ಅಂತ ಅನ್ನಿಸುತ್ತದೆ. ಸರಿಯಮ್ಮಾ, ಈಗ ನನಗೆ ಯಾವುದೋ ಒಂದು ಮಂತ್ರ ಬೇಕೆಂದರೆ ಅದನ್ನು ನೀಡುತ್ತೀರಾ?'' ಅದಕ್ಕೆ ಶ್ರೀಮಾತೆ, ''ಹೇಳು'' ಎಂದರು. ನಾನು ಅದನ್ನು ಕೇಳಿದೆ. ''ಈ ಮಂತ್ರ ನೀಡಿದರೆ ನಿನಗೆ ಸಂತೋಷವಾಗುವುದೆ?'' ಎಂದು ಅವರು ಕೇಳಿದರು. ನಾನಂದೆ: ''ಹೌದು.'' ಆಗ ಅವರು ಆ ಬೀಜಮಂತ್ರವನ್ನು ನನಗೆ ಹೇಳಿಕೊಟ್ಟರು. ಅದಲ್ಲದೆ, ೧೦೮ ಬಾರಿ ಹೇಗೆ ಜಪ ಮಾಡಬೇಕೆಂದು ತೋರಿಸಿಕೊಟ್ಟರು. ಮೂರುನಾಲ್ಕು ಮಾತುಗಳನ್ನಾಡಿ, ಹಾಗೂ ಉಪದೇಶ ನೀಡುತ್ತ ಅವರು ಹೇಳಿದರು: ''ಮಗೂ, ಗುರು ಮತ್ತು ಇಷ್ಟದೇವತೆ ಒಂದೇ ಎಂದು ತಿಳಿ. ಅವರ ನಡುವೆ ಯಾವುದೇ ಭೇದಭಾವನೆ ಹೊಂದಿರಬೇಡ.'' ಮಂತ್ರದೀಕ್ಷೆಯ ಕೊನೆಯಲ್ಲಿ ಗುರುದಕ್ಷಿಣೆ ಕೊಡಬೇಕೆಂದು ಆಗ ನನಗೆ ಗೊತ್ತಿರಲಿಲ್ಲ. ಅದಲ್ಲದೆ, ನನ್ನ ಜೇಬಿನಲ್ಲಿ ಅಂದು ಒಂದು ಪೈಸೆ ಕೂಡ ಇರಲಿಲ್ಲ. ಮನೆಯಲ್ಲಿ ತಿಂಡಿ ಮಾಡಿ ಶಾಲೆಗೆ ಹೋಗುತ್ತಿದ್ದೆ; ಶಾಲೆಯಿಂದ ಜಯರಾಮಬಾಟಿಗೆ ಹೋಗುತ್ತಿದ್ದೆ — ನಡೆದೇ ಅಲ್ಲಿಗೆ ಹೋಗುತ್ತಿದ್ದುದು. ಹಣದ ಅಗತ್ಯವೇ ಇರುತ್ತಿರಲಿಲ್ಲ. ಆದರೆ ಶ್ರೀಮಾತೆ ದಕ್ಷಿಣೆಯನ್ನು ಕುರಿತು ಏನನ್ನೂ ಹೇಳಲಿಲ್ಲ. ದೀಕ್ಷೆಯ ನಂತರ ನಾನು ಶ್ರೀಮಾತೆಯವರ ಎರಡೂ ಪಾದಗಳ ಮೇಲೆ ಕೈಯನ್ನಿಟ್ಟು ಪ್ರಣಾಮ ಮಾಡಹೊರಟೆ; (ಏಕೆಂದರೆ, ಹಿಂದೆ ಶ್ರೀಮಾತೆಯವರ ಪಾದಗಳ ಮೇಲೆ ನಾನು ತಲೆಯನ್ನಿಟ್ಟು ಪ್ರಣಾಮ ಮಾಡಲು ಹೊರಟಿದ್ದಾಗ, ಪಾದಗಳ ಮೇಲೆ ಕೈಯನ್ನಿಟ್ಟು ಪ್ರಣಾಮ ಮಾಡಿದರೆ ಸಾಕು ಎಂದು ಅವರು ಹೇಳಿದ್ದರು) ಆಗ ಶ್ರೀಮಾತೆ ಹೇಳಿದರು: ''ಇಂದು ಪಾದಗಳ ಮೇಲೆ ತಲೆಯನ್ನಿಟ್ಟು ಪ್ರಣಾಮ ಮಾಡಬೇಕು. ಏಕೆಂದರೆ, ಇಲ್ಲಿಯವರೆಗೆ ಯಾರು ತಾಯಿಯಾಗಿದ್ದರೋ, ಇಂದು ಅವರೇ 'ಗುರು'ವಾಗಿದ್ದಾರೆ.'' ಅವರೇ ನನಗೆ ಕಲಿಸಿಕೊಟ್ಟರು. ಅಂತೆಯೇ ನಾನು ಅವರ ಪಾದಗಳ ಮೇಲೆ ತಲೆಯನ್ನಿಟ್ಟು ನಮಸ್ಕರಿಸಿದೆ. ಶ್ರೀಮಾತೆ ಎರಡೂ ಕೈಗಳನ್ನು ನನ್ನ ತಲೆಯ ಮೇಲಿಟ್ಟು ಆಶೀರ್ವದಿಸಿ, ಬಳಿಕ ಹೇಳಿದರು: ''ನಡೆ, ಮಗೂ ನಡೆ. ಒಂದಿಷ್ಟು ತಿನ್ನುವಿಯಂತೆ, ನಡೆ. ಸಮಯವಾಗಿದೆ, ನಿನಗೆ ಹಸಿವಾಗಿದೆ.'' ನಾನು ಹೊರಗೆ ಬರುತ್ತಿರುವಷ್ಟರಲ್ಲಿ ಜ್ಞಾನ್-ದಾ (ಸ್ವಾಮಿ ಜ್ಞಾನಾನಂದ) ನನ್ನನ್ನು ಕರೆದು ಕೇಳಿದರು: ''ನೀನು ದಕ್ಷಿಣೆ ಏನಾದರೂ ಕೊಟ್ಟೆಯೇನು?'' ನಾನೆಂದೆ, ''ಇಲ್ಲ , ಹೇಗೆ ಕೊಡಲಿ? ನನ್ನ ಜೇಬಿನಲ್ಲಿ ಒಂದು ಪೈಸೆ ಕೂಡ ಇಲ್ಲವಲ್ಲ.'' ಆಗ ಜ್ಞಾನ್-ದಾ ತಮ್ಮ ಜೇಬಿನಿಂದ ಕರ್ಚೀಫ್

ಹೊರತೆಗೆದು, ಅದರಲ್ಲಿದ್ದ ರೂಪಾಯಿ, ಅರ್ಧರೂಪಾಯಿ, ಕಾಲು ರೂಪಾಯಿ, ಎರಡಾಣೆ ಇತ್ಯಾದಿ ಏನೇನು ಇತ್ತೋ ಅದನ್ನೆಲ್ಲ ನನ್ನ ಕೈಗಿತ್ತರು. ಎಲ್ಲ ಸೇರಿದರೆ ಎರಡೂವರೆ-ಮೂರು ರೂಪಾಯಿ ಆಗಬಹುದಿತ್ತು. ಅದನ್ನೆಲ್ಲ ತೆಗೆದುಕೊಂಡು ಶ್ರೀಮಾತೆಯವರ ಕೋಣೆಯ ಬಾಗಿಲ ಬಳಿ ಹೋದಾಗ ಅವರು ಕೇಳಿದರು, ''ಏನು ಮಗೂ?'' ನಾನು ನನ್ನಲ್ಲಿದ್ದ ನಾಣ್ಯಗಳನ್ನೆಲ್ಲ ಶ್ರೀಮಾತೆಯವರಿಗೆ ತೋರಿಸಿದೆ. ಅವರು ಕೇಳಿದರು, ''ಇವೆಲ್ಲ ಎಲ್ಲಿ ಸಿಕ್ಕಿದವು?'' ನಾನಂದೆ, ''ಜ್ಞಾನ್-ದಾ ಕೊಟ್ಟರು.'' ಆಗ ಅವರೆಂದರು, ''ಸರಿ, ಕೊಡು.'' ಅವನ್ನೆಲ್ಲ ಅವರು ಸ್ವೀಕರಿಸಿದರು. ನಾನು ಮತ್ತೆ ಅವರ ಪಾದಗಳ ಮೇಲೆ ತಲೆಯನ್ನಿಟ್ಟು ನಮಸ್ಕರಿಸಿದೆ. ಅವರು ನನ್ನ ತಲೆಯ ಮೇಲೆ ಕೈಯಿಟ್ಟು ಆಶೀರ್ವದಿಸಿ ಹೇಳಿದರು, ''ನಡೆ, ಈಗ ಒಂದಿಷ್ಟು ತಿನ್ನು.'' ಹೀಗೆಂದ ಅವರು ಒಂದು ತಟ್ಟೆಯಲ್ಲಿ ಕಡಲೆಪುರಿ ತಂದು ನನಗೆ ಕೊಟ್ಟರು. ನಾನು ಮತ್ತು ಶ್ರೀಮಾತೆ ಅಕ್ಕಪಕ್ಕದಲ್ಲಿ ಕುಳಿತು ತಿನ್ನುತ್ತಿದ್ದೆವು. ಶ್ರೀಮಾತೆ ಮಧ್ಯೆ ತಮ್ಮ ತಟ್ಟೆಯಿಂದ ಕಡಲೆಪುರಿ ತೆಗೆದುಕೊಂಡು, ನನ್ನ ತಟ್ಟೆಗೆ ಹಾಕಿ ಹೇಳಿದರು: ''ತಿನ್ನು ಮಗೂ, ತಿನ್ನು. ನನಗೆ ವಯಸ್ಸಾಯ್ತು; ಹಲ್ಲು ಅಲುಗಾಡುತ್ತಿದೆ. ಜಗಿಯಲು ಸಾಧ್ಯವಾಗುತ್ತಿಲ್ಲ.'' ಅಂದರೆ, ನಾನು ಬಯಸದೇ ಇದ್ದರೂ ಶ್ರೀಮಾತೆ ನನಗೆ ಪ್ರಸಾದ ಕೊಟ್ಟರು. ಈಗ ಭಕ್ತರು ಮಂತ್ರದೀಕ್ಷೆಯಾದ ಬಳಿಕ ಗುರುವಿನ ಪ್ರಸಾದವನ್ನು ಸ್ವೀಕರಿಸಿದ ನಂತರವೇ ತಿಂಡಿ ಮಾಡುತ್ತಾರೆ. ನಾನಾಗಿ ಕೇಳದಿದ್ದರೂ, ಕರುಣಾಮಯಿಯಾದ ಶ್ರೀಮಾತೆ ತಾವಾಗಿಯೇ ನನಗೆ ಪ್ರಸಾದವನ್ನಿತ್ತರು.

ಚಿಕ್ಕಂದಿನಿಂದಲೂ ನನಗೆ ಹೂದೋಟ ಮಾಡುವುದರಲ್ಲಿ ಆಸಕ್ತಿಯಿತ್ತು. ಈಗ ಒಂದೇ ಗುಲಾಬಿ ಗಿಡದಲ್ಲಿ ಬೇರೆ ಬೇರೆ ಬಣ್ಣದ, ಕೆಂಪು, ಬಿಳಿ, ಹಳದಿ, ಗುಲಾಬಿ ಮುಂತಾಗಿ ಹಲವು ಬಣ್ಣದ ಹೂಗಳು ಬಿಡುವಂತೆ ಮಾಡಬಲ್ಲೆ ; ಆದರೆ ಆಗ ನನಗೆ ಅದೆಲ್ಲ ಗೊತ್ತಿರಲಿಲ್ಲ. ಆಗ ಜಯರಾಮಬಾಟಿಯಲ್ಲಿ ಒಂದೊಂದು ದಿನ ಶ್ರೀಮಾತೆಗೆ ಪೂಜೆಗಾಗಿ ಒಂದು ಹೂ ಕೂಡ ಸಿಗುತ್ತಿರಲಿಲ್ಲ. ಬರೀ ತುಳಸೀಪತ್ರೆ, ಗರಿಕೆ, ಬಿಲ್ವಪತ್ರೆ ಹಾಗೂ ಗಂಧ ಇವುಗಳನ್ನು ಅರ್ಪಿಸಿ ಶ್ರೀಮಾತೆ ಶ್ರೀರಾಮಕೃಷ್ಣರನ್ನು ಉದ್ದೇಶಿಸಿ ಹೇಳುತ್ತಿದ್ದರು: ''ಠಾಕೂರ್, ಇವತ್ತು ಒಂದು ಹೂ ಕೂಡ ಬಿಡಲಿಲ್ಲ. ಇವನ್ನೆಲ್ಲ ಸ್ವೀಕರಿಸಿ ಸಂತುಷ್ಟರಾಗಿ.'' ನಾನು ಶ್ರೀಮಾತೆಯವರ ಮನೆಯ ಸಮೀಪದಲ್ಲಿದ್ದ ಪುಣ್ಯಪುಕುರವೆಂಬ ಕೆರೆಯ ಪಕ್ಕದಲ್ಲಿ ಜಾಜಿಮಲ್ಲಿಗೆ, ಕಣಗಿಲೆ, ಚೆಂಡು ಹೂ, ಗೌರಿಹೂ, ದಾಸವಾಳ, ನಂಜಬಟ್ಟಲು ಮುಂತಾದ ಹೂಗಳ ಗಿಡಗಳನ್ನು ನೆಟ್ಟು ಬೆಳೆಸಿದ್ದೆ. ಅವುಗಳಿಂದ ಹೂ ತಂದುಕೊಟ್ಟಾಗ ಶ್ರೀಮಾತೆ ಎಷ್ಟೊಂದು ಆನಂದಿಸುತ್ತಿದ್ದರು! ಒಂದು ದಿನ ನಾನು ನೋಡಿದೆ, ಶ್ರೀಮಾತೆ ಮಧ್ಯಾಹ್ನ ವಿಶ್ರಾಂತಿಯ ಬಳಿಕ ಜಾಜಿಮಲ್ಲಿಗೆಯ ಬೇರನ್ನು ಅಗೆದು ತೆಗೆಯುತ್ತಿದ್ದರು. ''ಅದನ್ನೆಲ್ಲ ನಾನೇ ಮಾಡುತ್ತೇನೆ. ನೀವು ಮಾಡಬೇಕಿಲ್ಲ'' ಎಂದು ನಾನು ಅವರ ಕೈಯಿಂದ ಕಳೆ ಕೀಳುವ ಸೀಳುಗುದ್ದಲಿ ಕಸಿದುಕೊಂಡೆ. ಆಗ ಅವರು, ''ನೀನೇ ಎಲ್ಲ ಮಾಡು. ನನಗೆ ಜಾಜಿ ಎಂದರೆ ತುಂಬಾ ಇಷ್ಟವಲ್ಲವೆ? ಅದಕ್ಕಾಗಿಯೇ ಅದು ಹೂ ಬಿಡುವ ಈ ಸಮಯದಲ್ಲಿ ಅದಕ್ಕೆ ಒಂದಿಷ್ಟು ನೀರು ಎರೆಯೋಣ ಅಂತ ಬಿಡುವು ಮಾಡಿಕೊಂಡು ಬಂದೆ'' ಎಂದರು. ಕಣಗಿಲೆಯ ಗಿಡದಲ್ಲಿ ಮೊದಲ ಬಾರಿ ಹೂ ಬಿಟ್ಟಾಗ ಕೂಡ ಶ್ರೀಮಾತೆ ಪೂಜೆಗಾಗಿ ಬೇರೆ ಯಾರಿಗೂ ಹೂ ಕೀಳಲು ಬಿಡಲಿಲ್ಲ. ''ತನ್ನ ಗಿಡದಲ್ಲಿ ಎಷ್ಟು ಹೂ ಬಿಟ್ಟಿದೆ ಎಂದು ರಾಮಮಯ ಬಂದು ನೋಡುತ್ತಾನೆ. ಅವನು ತನ್ನ ಕೈಯಿಂದಲೇ ಹೂ ಕಿತ್ತು ತಂದು ಕೊಡುತ್ತಾನೆ. ಅನಂತರ ಅದನ್ನು ನಾನು ಠಾಕೂರರಿಗೆ ಅರ್ಪಿಸುತ್ತೇನೆ'' ಎಂದು ಅವರು ಹೇಳುತ್ತಿದ್ದರು. ಅದೆಂಥ ಸ್ನೇಹ ಅವರದು! ನಾನು ಶನಿವಾರ ಅಲ್ಲಿಗೆ ಹೋಗಿ, ಶ್ರೀಮಾತೆಗೆ ಪ್ರಣಾಮ ಮಾಡುತ್ತಿದ್ದಂತೆಯೇ ಅವರು ನನ್ನ ಕೈ ಹಿಡಿದುಕೊಂಡು, ಆ ಗಿಡದ ಬಳಿಗೆ ಕರೆದುಕೊಂಡು ಹೋಗಿ ಹೇಳಿದರು: ''ನೋಡು, ನಿನ್ನ ಗಿಡದಲ್ಲಿ ಎಷ್ಟು ಸುಂದರವಾದ ಹೂಗಳು ಬಿಟ್ಟಿವೆ! ಅದೂ ಅಲ್ಲದೆ ಎಂಥ ಸುಗಂಧ ಬೇರೆ!'' ನನಗೆ ಹೂ ಬುಟ್ಟಿ ಕೊಟ್ಟರು. ನಾನು ಹೂಗಳನ್ನು ಕಿತ್ತು ತಂದೆ; ಅದರಿಂದ ಶ್ರೀಮಾತೆ ಶ್ರೀರಾಮಕೃಷ್ಣರ ಪೂಜೆ ಮಾಡಿದರು.

ಒಂದು ದಿನ ನಿಂಬೆ ಹಣ್ಣಿನ ಕಸಿಯನ್ನು ನಾನೇ ತಯಾರಿಸಬೇಕೆಂದು ಕೊಂಡೊಯ್ಯುತ್ತಿದ್ದೆ. ಅದರಲ್ಲಿ ೭-೮ ಹಣ್ಣುಗಳಿದ್ದವು. ಅದನ್ನು ನೋಡಿದ ಶ್ರೀಮಾತೆ ತುಂಬಾ ಆನಂದಗೊಂಡರು. ಎಲ್ಲರಿಗೂ ಅವರು ಹೇಳತೊಡಗಿದರು: ''ನೋಡಿದೆಯಾ, ಹುಡುಗನಿಗೆ ಎಂಥ ಬುದ್ಧಿ! ಎಂಥ ಗಿಡವನ್ನು ಕಸಿಮಾಡಿ ತಂದನೆಂದರೆ, ಅದರಲ್ಲಿ ಈಗಲೇ ಹಣ್ಣು ಬಿಡಲಾರಂಭಿಸಿದೆ!'' ಒಂದು ದಿನ ಒಂದು ನೆಲ್ಲಿ ಮರದಿಂದ ನೆಲ್ಲಿಕಾಯಿಗಳನ್ನು ಬಿಟ್ಟಿರುವ ಒಂದು ದೊಡ್ಡ ಗೆಲ್ಲನ್ನು ಕಿತ್ತು ತಂದು ಶ್ರೀಮಾತೆಯವರಿಗೆ ಕೊಟ್ಟಿದ್ದೆ. ಅದನ್ನು ನೋಡಿ ಶ್ರೀಮಾತೆ ಅಸಮಾಧಾನಗೊಂಡರು. ಕಾಯಿ ಬಿಡುವ ಮರದಿಂದ ಕಾಯಿಸಮೇತ ಗೆಲ್ಲನ್ನು ಮುರಿದು ತರುವುದನ್ನು ಶ್ರೀಮಾತೆ ನಿಷೇಧಿಸಿದರು, ಅದರಲ್ಲೂ ವಿಶೇಷವಾಗಿ ನೆಲ್ಲಿ ಮರದಿಂದ. ಆ ನೆಲ್ಲಿ ಮರ ಆಮೋದರ ನದಿಯ ತೀರದಲ್ಲಿತ್ತು. ಆ ಮರದ ಕೆಳಗೆ ಪೂಜ್ಯ ಶರತ್ ಮಹಾರಾಜ್, ಯೋಗಿನ್ ಮಾ, ಗೋಲಾಪ್ ಮಾ ಮೊದಲಾದವರೆಲ್ಲ ಧ್ಯಾನ ಮಾಡುತ್ತಿದ್ದರು. ಅಲ್ಲಿ ಶರತ್ ಮಹಾರಾಜರು ಗೀತೆಯನ್ನು ಓದುತ್ತಿದ್ದರು ಕೂಡ. ಶ್ರೀಮಾತೆ ಇನ್ನಷ್ಟು ಹೇಳುತ್ತಿದ್ದರು: ''ನೆಲ್ಲಿ ಮರದ ಕೆಳಗೆ ಮೂವತ್ತುಮೂರು ಕೋಟಿ ದೇವತೆಗಳು ವಾಸವಾಗಿರುತ್ತಾರೆ. ಅದರ ಕೆಳಗೆ ಕುಳಿತು ಧ್ಯಾನ-ಜಪ ಮಾಡಿದರೆ ಹೆಚ್ಚಿನ ಫಲ ದೊರಕುವುದು.'' ಅನಂತರ ಆ ಗೆಲ್ಲಿನಿಂದ ನೆಲ್ಲಿ ಎಲೆಗಳನ್ನು ಕಿತ್ತು ಪೂಜೆಗಾಗಿ ಇಡಲು ಅವರು ಹೇಳಿದರು: ''ಬಿಲ್ವಪತ್ರೆಯಂತೆ ಈ ಎಲೆಗಳನ್ನು ಕೂಡ ಪೂಜೆಗೆ ಬಳಸಬಹುದು.''

ಇನ್ನೊಂದು ದಿನ ಪುಣ್ಯಪುಕುರ ಕೆರೆಯ ಉತ್ತರ ಭಾಗದ ತೋಟದಲ್ಲಿ ನಾನು ಮತ್ತು ಜ್ಞಾನ್ ಮಹಾರಾಜ್ ಒಂದಿಷ್ಟು ಬಾಳೆ